ಸಂಪುಟ : 10 ಸಂಚಿಕೆ: 68 ಪುಟ : 4+2 ಬೆಲೆ: 3.00 ರವಿವಾರ ಎಪ್ರಿಲ್ 13 2025 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 10 Issue : 68 Pages : 4+2 Price : 3.00 Sunday April 13 2025 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ಇಂದು



■ವಿಜಯಸಾಕ್ಷಿ ಸುದ್ದಿ, ಗದಗ

ಗ್ಯಾಸ್, ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಖಂಡಿಸಿ ಕೇಂದ್ರ ಸರ್ಕಾರದ ವಿರುದ್ಧ ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ನಗರದ ಮಹಾತ್ಮ ಗಾಂಧಿ ವೃತ್ತದಲ್ಲಿ ಎ.13ರಂದು ಬೆಳಿಗ್ಗೆ 10ಕ್ಕೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೃಷ್ಣಗೌಡ ಎಚ್.ಪಾಟೀಲ ನೇತೃತ್ವದಲ್ಲಿ ಪ್ರತಿಭಟನೆ ನಡೆಯಲಿದ್ದು, ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ ಅಕ್ಷಯ ಪಾಟೀಲ ಪಾಲ್ಗೊಳ್ಳುವರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಪಕ್ಷದ ಮಾಜಿ ಹಾಗೂ ಹಾಲಿ ಶಾಸಕರು, ಪಕ್ಷದ ಜಿಲ್ಲಾ ಪದಾಧಿಕಾರಿಗಳು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ, ಎಪಿಎಂಸಿ ಪಕ್ಷದ ಅಧ್ಯಕ್ಷರು, ಸದಸ್ಯರು, ಹಾಗೂ ನಗರಸಭೆ, ಪಟ್ಟಣ ಪಂಚಾಯಿತಿ, ಪುರಸಭೆ ಅಧ್ಯಕ್ಷರು ಹಾಗೂ ಸದಸ್ಯರು, ಮಹಿಳಾ ಕಾಂಗ್ರೆಸ್, ಯುವ ಕಾಂಗ್ರೆಸ್, ಎಸ್‌ಸಿ/ಎಸ್‌ಟಿ, ಅಲ್ಪಸಂಖ್ಯಾತರ, ವಿದ್ಯಾರ್ಥಿ ಕಾಂಗ್ರೆಸ್, ಕಾಂಗ್ರೆಸ್ ಸೇವಾದಳ, ಹಿಂದುಳಿದ ವರ್ಗ, ಸಾಮಾಜಿಕ ಜಾಲತಾಣ, ರಾಜೀವಗಾಂಧಿ ಪಂಚಾಯತ ಸಂಘಟನೆ, ಮಾಜಿ ಸೈನಿಕರ ವಿಭಾಗ, ಮೀನುಗಾರ ವಿಭಾಗ, ಕಾರ್ಮಿಕರ ವಿಭಾಗ, ಐಎನ್‌ಟಿಯುಸಿ, ಕಾನೂನು ಮತ್ತು ಮಾನವ ಹಕ್ಕು ವಿಭಾಗ, ಕಿಸಾನ್ ಮತ್ತು ಖೇತ್ ಮಜದೂರ ವಿಭಾಗ, ಮಾಜಿ ಸೈನಿಕರ ವಿಭಾಗ, ವೈದ್ಯರ ವಿಭಾಗ, ವೃತ್ತಿಪರ ವಿಭಾಗ, ಪದವೀಧರ ಹಾಗೂ ಶಿಕ್ಷಕರ ವಿಭಾಗ, ನೀತಿ ಮತ್ತು ಸಂಶೋಧನೆ ತರಬೇತಿ ವಿಭಾಗ, ವಿಕಲಚೇತನರ ವಿಭಾಗ, ಲಿಗಲ್ ರೀಪಾರ್ಮ್ಸ್ ವಿಭಾಗ, ಐಟಿ ಮತ್ತು ಡಾಟಾ ವಿಭಾಗ, ಮಾಧ್ಯಮ ಮತ್ತು ಸಂಪರ್ಕ ಇಲಾಖೆ ವಿಭಾಗಗಳ ಅಧ್ಯಕ್ಷರು ಹಾಗೂ ಸದಸ್ಯರು, ಪಕ್ಷದ ಅಭಿಮಾನಿಗಳು ಪಾಲ್ಗೊಳ್ಳಬೇಕು ಎಂದು ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ವಿನಂತಿಸಿದೆ.

ಜ. ತೋಂಟದಾರ್ಯ ಜಾತ್ರಾಮಹೋತ್ಸವ ಪ್ರಾರಂಭೋತ್ಸವದಲ್ಲಿ ಬಸವರಾಜ ರಾಯರೆಡ್ಡಿ ಅಭಿಮತ

# ತೋಂಟದಾರ್ಯ ಜಾತ್ರೆ ಪ್ರಜ್ಞಾವಂತ ಮೌಲ್ಯಗಳ ಸಂಕೇತ

■ವಿಜಯಸಾಕ್ಷಿ ಸುದ್ದಿ, ಗದಗ

ಜಾತ್ರೆಗಳು ದೇವರು-ಧರ್ಮದ ಹೆಸರಿನಲ್ಲಿ ಮೌಢ್ಯಗಳಿಗೆ, ಅರ್ಥಹೀನ ಆಚರಣೆಗಳಿಗೆ ಬಲಿಯಾಗುವ ಅನೇಕ ನಿದರ್ಶನಗಳು ನಮ್ಮ ನಾಡಿನಲ್ಲಿವೆ. ಆದರೆ ಅವೆಲ್ಲಕ್ಕಿಂತ ಭಿನ್ನವಾಗಿ ನಡೆಯುವ ತೋಂಟದಾರ್ಯ ಮಠದ ಜಾತ್ರೆಯು ಅರಿವು-ಆಚಾರ-ವಿಚಾರಗಳಂಥ ಪ್ರಜ್ಞಾವಂತ ಮೌಲ್ಯಗಳ ಸಂಕೇತವಾಗಿದೆ ಎಂದು ಶಾಸಕರು ಹಾಗೂ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾದ ಬಸವರಾಜ ರಾಯರೆಡ್ಡಿ ನುಡಿದರು.

ಅವರು ಶನಿವಾರ ನಗರದ ತೋಂಟದಾರ್ಯ ಮಠದ 2025ನೇ ಸಾಲಿನ ಜಾತ್ರಾ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

500 ವರ್ಷಗಳ ಭವ್ಯ ಪರಂಪರೆ ಇರುವ



ತೋಂಟದಾರ್ಯ ಮಠದ ಜಾತ್ರೆಯನ್ನು ಉದ್ಘಾಟಿಸುವ ಅವಕಾಶ ಸಿಕ್ಕಿದ್ದು ನನ್ನ ಸೌಭಾಗ್ಯ. 12ನೇ ಶತಮಾನದಲ್ಲಿ ಸಮ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದ ಬಸವಾದಿ ಶರಣರ ಹಾದಿಯಲ್ಲಿ ಶ್ರೀ ತೋಂಟದಾರ್ಯ ಮಠ ಸಾಗಿಬಂದಿದ್ದು, ಮನುಕುಲವನ್ನು ವಿಭಜಿಸುವ ಶಕ್ತಿಗಳನ್ನು ಮೀರಿ ಸಮಾನತೆಯನ್ನು ಸಾಧಿಸುವ ಅನಿವಾರ್ಯತೆ ಇದೆ ಎಂದರು.

ಮನುಜಕುಲದ ನಾಗರಿಕತೆ ಬೆಳೆದುಬಂದ ಇತಿಹಾಸವನ್ನು ಅವಲೋಕಿಸಿದರೆ ಮನುಷ್ಯನನ್ನು ಸನ್ಮಾರ್ಗದಲ್ಲಿ ನಡೆಸುವುದಕ್ಕಾಗಿ ದೇವರು-ಧರ್ಮಗಳು ಹುಟ್ಟಿಕೊಂಡಿವೆ. ಆದರೆ ಅದೇ ದೇವರು-ಧರ್ಮದ ಹೆಸರಿನಲ್ಲಿ ಅಸಮಾನತೆ-ಅನಾಚಾರಗಳು ನಡೆಯುತ್ತಿರುವುದು ವಿಪರ್ಯಾಸವಾಗಿದೆ. ಬಸವತತ್ವವು ಸಮ ಸಮಾಜದ ನಿರ್ಮಾಣಕ್ಕೆ ಅಡಿಗಲ್ಲಾಗಿದ್ದು, ಶೀಘ್ರದಲ್ಲೇ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ವಚನ ಸಾಹಿತ್ಯದ ಉನ್ನತೀಕರಣ ಹಾಗೂ ಅಧ್ಯಯನಕ್ಕಾಗಿ ವಚನ ವಿಶ್ವವಿದ್ಯಾಲಯ ನಿರ್ಮಿಸಲಾಗುವುದು ಎಂದರು.

ಉಪನ್ಯಾಸಕರಾಗಿ ಆಗಮಿಸಿದ್ದ ಖ್ಯಾತ ವಿಜ್ಞಾನ ಸಾಹಿತಿಗಳಾದ ಡಾ. ನಾ. ಸೋಮೇಶ್ವರ ಉಪನ್ಯಾಸ ನೀಡಿ, 12ನೇ ಶತಮಾನದಲ್ಲಿ ಕನ್ನಡ ಭಾಷೆಯಲ್ಲಿ ರಚನೆಯಾದ ವಚನಗಳು ಶ್ರೀಸಾಮಾನ್ಯನಿಗೂ ಅಭಿವ್ಯಕ್ತಿಯ ಸ್ವಾತಂತ್ರ್ಯ ನೀಡಿದವು. ಪಂಡಿತರ ಭಾಷೆಯಾದ ಸಂಸ್ಕೃತವನ್ನು ಮೀರಿ ಕನ್ನಡ ಭಾಷೆಯಲ್ಲೇ ಸಾಮಾನ್ಯರು ತಮ್ಮ ಉದಾತ್ತ ವಿಚಾರಗಳನ್ನು ಪ್ರಸ್ತುತಪಡಿಸಿದರು.

ತೋಂಟದಾರ್ಯ ಜಾತ್ರಾ ಸಮಿತಿ ಅಧ್ಯಕ್ಷ ಡಾ. ಧನೇಶ ದೇಸಾಯಿ ಸ್ವಾಗತಿಸಿದರು. ಆಡಳಿತಾಧಿಕಾರಿ ಪ್ರೊ. ಎಸ್.ಎಸ್. ಪಟ್ಟಣಶೆಟ್ಟರ ಅತಿಥಿಗಳನ್ನು ಪರಿಚಯಿಸಿದರು.

ಸಾನ್ನಿಧ್ಯ ವಹಿಸಿದ್ದ ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು. ಗುಳೇದಗುಡ್ಡದ ಗುರುಸಿದ್ಧೇಶ್ವರ ಮಠದ ಗುರುಸಿದ್ಧ ಪಟ್ಟದಾರ್ಯ ಮಹಾಸ್ವಾಮಿಗಳು ಹಾಗೂ ಸಂತೇಕಲ್ಲೂರ ಘನಮಠೇಶ್ವರ ಮಠದ ಗುರುಬಸವ ಮಹಾಸ್ವಾಮಿಗಳು ಸಮ್ಮುಖ ವಹಿಸಿದ್ದರು.

ಆದಿಚುಂಚನಗಿರಿ ಶಾಖಾಮಠ ಹೇಮಗಿರಿ-ಧಾರವಾಡದ ಕಾರ್ಯದರ್ಶಿಗಳಾದ ಡಾ. ಜೆ.ಎನ್. ರಾಮಕೃಷ್ಣೇಗೌಡರನ್ನು ಸನ್ಮಾನಿಸಲಾಯಿತು. ಖ್ಯಾತ ಸಂಗೀತಗಾರರಾದ ಉಸ್ತಾದ ರೈಸ್ ಬಾಲೇಖಾನ್ ಅವರಿಂದ ಸಿತಾರ ವಾದನ ಹಾಗೂ ಹಿಂದೂಸ್ತಾನಿ ಗಾಯಕಿ ಡಾ. ವೀಣಾ ಬಡಿಗೇರ ಅವರಿಂದ ವಚನ ಸಂಗೀತ ನಡೆಯಿತು. ತೋಂಟದಾರ್ಯ ಮಠದ ಜಾತ್ರಾ ಸಮಿತಿ ಅಧ್ಯಕ್ಷರು-ಪದಾಧಿಕಾರಿಗಳು ಹಾಗೂ ಶ್ರೀಮಠದ ಸದ್ಭಕ್ತರು ಹಾಜರಿದ್ದರು.

> ಡಾ. ಎಂ.ಎಂ. ಕಲಬುರ್ಗಿ ಅಧ್ಯಯನ ಸಂಸ್ಥೆಯಿಂದ ಪ್ರಕಟವಾದ ಡಾ. ಎಸ್.ಜಿ. ಮಹಾದೇವಪ್ಪ ರಚಿಸಿದ 'ದಾರ್ಶನಿಕ ಬಸವಣ್ಣ', ಡಾ. ಶ್ರೀಧರ ಗಂಗನಗೌಡ ಗೌಡರ ರಚಿಸಿದ 'ತೋಂಟದಾರ್ಯ ಮಠದ ಸಮಾಜಮುಖಿ ಚಳುವಳಿಗಳು; ವಿಶ್ಲೇಷಣಾತ್ಮಕ ಅಧ್ಯಯನ', ಡಾ. ರಾಜಶೇಖರ ಜಮದಂಡಿ ರಚಿಸಿದ 'ಷಟಸ್ಥಲ ಚಕ್ರವರ್ತಿ ಚನ್ನಬಸವಣ್ಣ' ಗ್ರಂಥಗಳನ್ನು ವಿಧಾನ ಪರಿಷತ್ ಸದಸ್ಯ ಎಸ್.ವಿ ಸಂಕನೂರ ಬಿಡುಗಡೆ ಮಾಡಿದರು.

> ಬಸವಾದಿ ಶರಣರ ವಚನಗಳಲ್ಲಿ ಅನೇಕ ವೈಜ್ಞಾನಿಕ ಮಜಲುಗಳಿವೆ. ಉದಾಹರಣೆಗೆ ಬಸವೇಶ್ವರರ 'ಚಂದ್ರೋದಯಕ್ಕೆ ಅಂಭುದಿ ಹೆಚ್ಚುವುದಯ್ಯ' ಎಂಬ ವಚನದಲ್ಲಿ ಗುರುತ್ವಾಕರ್ಷಣೆಯ ತತ್ವವು ಅಡಗಿದೆ. ಅಷ್ಟೇ ಅಲ್ಲದೇ ಇನ್ನೊಂದು ವಚನದಲ್ಲಿ ಬಸವೇಶ್ವರರು ಭೌತಶಾಸ್ತ್ರದ ಅಂಶಗಳಾದ ಕಾಲ, ಉದ್ದ, ದ್ರವ್ಯರಾಶಿಯ ಕುರಿತು ಮಹತ್ವದ ವ್ಯಾಖ್ಯಾನ ನೀಡಿದ್ದಾರೆ. ವಚನಗಳು ನಮ್ಮ ಬದುಕಿಗೆ ದಾರಿದೀಪವಾಗಿದ್ದು, ಅವುಗಳ ಸಾರವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು.
>
> **– ಡಾ. ನಾ. ಸೋಮೇಶ್ವರ. ಖ್ಯಾತ ವಿಜ್ಞಾನ ಸಾಹಿತಿಗಳು.**

## ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದ ಬೈಕ್: ಇಬ್ಬರು ಸ್ಥಳದಲ್ಲೇ ಸಾವು

■ವಿಜಯಸಾಕ್ಷಿ ಸುದ್ದಿ, ಮಂಗಳೂರು

ಬೈಕ್ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸವಾರರು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ದಕ್ಷಿಣ ಕನ್ನಡದ ಕೊಕ್ರಾಡಿ ಪುರುಷಗುಡ್ಡೆ ಎಂಬಲ್ಲಿ ನಡೆದಿದೆ.

ಸ್ಥಳೀಯ ನಿವಾಸಿ ಪ್ರಶಾಂತ್ ಹಾಗೂ ಸಹ ಸವಾರ ಬೆಳ್ತಂಣ್ ನಿವಾಸಿ ದಿನೇಶ್ ಮೃತ ದುರ್ದೈವಿಗಳಾಗಿದ್ದು, ಅತಿವೇಗದಲ್ಲಿದ್ದ ಬೈಕ್ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿಯಾಗಿದೆ ಎಂದು ತಿಳಿದು ಬಂದಿದೆ.

ಅಪಘಾತದ ರಭಸಕ್ಕೆ ಸ್ಥಳದಲ್ಲೇ ಯುವಕರು ಸಾವಿಗೀಡಾಗಿದ್ದಾರೆ.

ಸುದ್ದಿ ತಿಳಿದು ಸ್ಥಳಕ್ಕೆ ವೇಣೂರು ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಈ ಕುರಿತು ಪ್ರಕರಣ ದಾಖಲಾಗಿದೆ.

ಸಿದ್ದಲಿಂಗ ನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ಗುರುವಂದನಾ ಕಾರ್ಯಕ್ರಮ

# ಶಿಕ್ಷಕರ ಸ್ವಾಭಿಮಾನದ ಪ್ರತೀಕ ಹೊರಟ್ಟಿ

■ವಿಜಯಸಾಕ್ಷಿ ಸುದ್ದಿ, ಗದಗ

ಬದುಕಿನ ಭರವಸೆಯನ್ನು ಕಳೆದುಕೊಂಡು ಅತಂತ್ರದಲ್ಲಿದ್ದ ನಾಡಿನ ಸಾವಿರಾರು ಶಿಕ್ಷಕರಿಗೆ ಬೆಳಕಾಗುವ ಮೂಲಕ ಆ ಕುಟುಂಬದ ಬದುಕಿಗೆ ಬಣ್ಣ ತುಂಬಿ, ನೆಮ್ಮದಿಯ ಜೀವನಕ್ಕೆ ದಾರಿ ಮಾಡಿಕೊಟ್ಟು ನಾಡಿನ ಶಿಕ್ಷಕರಿಗೆ ಸ್ವಾಭಿಮಾನದ ಪ್ರತೀಕವಾದವರು ಸಭಾಪತಿ ಬಸವರಾಜ್ ಹೊರಟ್ಟಿ ಎಂದು ಡಿ.ಡಿ.ಪಿ.ಐ ಆರ್.ಎಸ್. ಬುರುಡಿ ಹೇಳಿದರು.

ಸಭಾಪತಿ ಬಸವರಾಜ್ ಹೊರಟ್ಟಿ ದಂಪತಿಗಳು ದತ್ತು ಪಡೆದಿರುವ ಸಿದ್ದಲಿಂಗ ನಗರದಲ್ಲಿರುವ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ಗುರುವಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಹಳೆ ವಿದ್ಯಾರ್ಥಿಗಳ ವೃಂದದಿಂದ ಹೊರಟ್ಟಿಯವರನ್ನು ಸನ್ಮಾನಿಸಿ ಮಾತನಾಡಿದರು.

ಹೊರಟ್ಟಿಯವರು ಕಳೆದ 45 ವರ್ಷಗಳಿಂದ ಶಿಕ್ಷಕರ ಧ್ವನಿಯಾಗಿ ಅವರೆಲ್ಲರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಬಂದಿದ್ದಾರೆ. ಶಿಕ್ಷಣ ಸಚಿವರಾಗಿದ್ದಾಗ ಶಿಕ್ಷಣ ಇಲಾಖೆಗೆ ಅವರು ನೀಡಿದ ಕೊಡುಗೆ ಅಪಾರ. ಗ್ರಾಮೀಣ ಭಾಗದಲ್ಲಿ ಸಾವಿರಾರು ಶಾಲಾ-ಕಾಲೇಜುಗಳನ್ನು ಆರಂಭಿಸಲು



ಅನುಮತಿ ನೀಡಿ ಶಿಕ್ಷಣದಿಂದ ವಂಚಿತರಾಗುತ್ತಿದ್ದ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಕಲಿಕೆಗೆ ಅವಕಾಶ ಮಾಡಿಕೊಟ್ಟವರು. 45 ಸಾವಿರಕ್ಕೂ ಹೆಚ್ಚು ಶಿಕ್ಷಕರ ನೇಮಕ ಮಾಡುವ ಮೂಲಕ ನಿರುದ್ಯೋಗಿ ಪದವೀಧರ ಶಿಕ್ಷಕರ ಅನ್ನಕ್ಕೆ ಹಾದಿ ತೋರಿದವರು.

ಸನ್ಮಾನ ಸ್ವೀಕರಿಸಿ ಸಭಾಪತಿ ಬಸವರಾಜ್ ಹೊರಟ್ಟಿ ಮಾತನಾಡಿ, ಎಲ್ಲರಿಗೂ ಶುಭ ಕೋರಿದರು.

ಈ ಸಂದರ್ಭದಲ್ಲಿ ಶಾಲಾ ದತ್ತು ಉಸ್ತುವಾರಿ ಡಾ. ಬಸವರಾಜ್ ಧಾರವಾಡ, ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿ ಶಿವಾನಂದ ಪಟ್ಟಣಶೆಟ್ಟಿ, ಬಿಇಓ ಆರ್.ವಿ. ಶೆಟ್ಟಪ್ಪನವರ್, ಶಿಕ್ಷಕರಾದ ಎಸ್.ಆರ್. ಹೂಗಾರ, ಎಂ.ವೀರಪ್ಪ, ಎ.ಎಂ. ಕುಂಟೋಜಿ, ಎಂ.ಪಿ. ಚಿಂಚೇವಾಡಿ, ವಿ.ಎಂ. ಬೂದಿಹಾಳ, ಜಯಲಕ್ಷ್ಮೀ ಅಣ್ಣಿಗೇರಿ, ವಿ.ಬಿ. ತಾಳಿಕೋಟಿ, ಎಸ್.ಆರ್. ಹನುಮಗೌಡ್ರು, ಗಾಯಿತ್ರಿ ವಸ್ತ್ರದ, ಎಸ್.ಸುನೀತಾ, ಮಂಜುಳಾ ಸಾಮ್ರಾಣಿ, ಸಂಗೀತಾ ಪಾಟೀಲ, ಎಂ.ಐ. ಶಿವನಗೌಡ, ಸುಮಂಗಲ ಪತ್ತಾರ, ಶೋಭಾ ಗಾಳಿ, ರಮೇಶ ಬಸರಿ, ಸಾವಿತ್ರಿ ಗದ್ದನಕೇರಿ, ಎನ್.ಆರ್. ಶಿರೋಳ್, ಗಂಗಾ ಎಂ.ಅಳವಂಡಿ, ಮಂಜುಳಾ ಟಿ.ಶಶಿಕಲಾ ಬಿ.ಗುಳೇದವರ, ಸಬಿಯ ಯು. ಕುಷ್ಟಗಿ, ಸಂಜೀವಿನಿ ಕೂಲಗುಡಿ, ಪದ್ಮಾ ವಿ.ದಾಸರ, ಲಕ್ಷ್ಮಮ್ಮ ಮಾಳೋತ್ತರ ಅವರಿಗೆ ಗುರುವಂದನೆ ಸಲ್ಲಿಸಲಾಯಿತು.

> ಸಿದ್ದಲಿಂಗ ನಗರದ ಸರ್ಕಾರಿ ಪ್ರೌಢಶಾಲೆಯನ್ನು ದತ್ತು ಪಡೆದು ರಾಜ್ಯದಲ್ಲಿಯೇ ಒಂದು ಮಾದರಿ ಶಾಲೆಯಾಗಿ ಬೆಳೆದು ನಿಲ್ಲಲು ಕಾರಣೀಕರ್ತರಾದ ಹೊರಟ್ಟಿ ದಂಪತಿಗಳಿಗೆ ಇಲಾಖೆ ಪರವಾಗಿ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಅವರನ್ನ ಎಷ್ಟು ಬಾರಿ ಗೌರವಿಸಿ ಸನ್ಮಾನಿಸಿದರೂ ಅವರ ಋಣವನ್ನ ತೀರಿಸಲು ಸಾಧ್ಯವಿಲ್ಲವೆಂದು ಆರ್.ಎಸ್. ಬುರುಡಿ ಅಭಿಪ್ರಾಯಪಟ್ಟರು.

## ಎ.15ರಂದು ಕಚೇರಿ ಪೂಜಾ ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಮುಳಗುಂದ ನಾಕಾ ಸಮೀಪದ ಕೆಎಸ್‌ಆರ್‌ಟಿಸಿ ಡಿಪೋ ಎದುರಿನ ಉಪವಿಭಾಗಾಧಿಕಾರಿ ಕಚೇರಿ ಆವರಣದಲ್ಲಿ ಗದಗ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಅಶೋಕ ಮಂದಾಲಿ ಅವರ ಕಚೇರಿ ಪೂಜಾ ಕಾರ್ಯಕ್ರಮ ಎಪ್ರಿಲ್ 15ರಂದು ಬೆಳಗ್ಗೆ 11ಕ್ಕೆ ಜರುಗಲಿದೆ.

ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್. ಕೆ.ಪಾಟೀಲ ಅವರು ಉದ್ಘಾಟಿಸಿ, ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಮಾಜಿ ಮುಖ್ಯಮಂತ್ರಿ ಹಾಗೂ ಹಾವೇರಿ ಸಂಸದರಾದ



ಬಸವರಾಜ ಬೊಮ್ಮಾಯಿ, ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಎಚ್. ಎಂ. ರೇವಣ್ಣ, ಉಪಾಧ್ಯಕ್ಷರಾದ ಎಸ್.ಆರ್. ಪಾಟೀಲ(ಬ್ಯಾಡಗಿ), ಕರ್ನಾಟಕ ಖನಿಜ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ರೋಣ ಶಾಸಕರಾದ ಜಿ.ಎಸ್. ಪಾಟೀಲ, ಸಂಸದ ಪಿ.ಸಿ. ಗದ್ದಿಗೌಡರ, ವಿಧಾನ ಪರಿಷತ್ ಸದಸ್ಯರಾದ ಎಸ್.ವಿ. ಸಂಕನೂರ, ಪ್ರದೀಪ್ ಶೆಟ್ಟರ್, ನರಗುಂದ ಶಾಸಕರಾದ ಸಿ.ಸಿ. ಪಾಟೀಲ ಆಗಮಿಸುವರು.

ಗದಗ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸದಸ್ಯರಾದ ಕೃಷ್ಣಗೌಡ ಎಚ್. ಪಾಟೀಲ, ಮೀನಾಕ್ಷಿ ಬೆನಕಣ್ಣವರ, ದೇವರಡ್ಡಿ ತಿರ್ಲಾಪೂರ, ಶಂಭು ಕಾಳೆ, ರಮೇಶ ಹೊನ್ನಿನಾಯ್ಕರ, ಭಾಷಾಸಾಬ ಮಲ್ಲಸಮುದ್ರ, ದಯಾನಂದ ಪವಾರ, ನಿಂಗಪ್ಪ ದೇಸಾಯಿ, ಸಂಗಮೇಶ ಕೆರಕಲಮಟ್ಟಿ, ಸಂಗಮೇಶ ಹಾದಿಮನಿ, ಮಲ್ಲಪ್ಪ ದಂಡಿನ, ಗಣೇಶಸಿಂಗ್ ಮಿಟಾಡ, ಮಲ್ಲಪ್ಪ ಬಾರಕೇರ, ಸಾವಿತ್ರಿ ಹೂಗಾರ ಪಾಲ್ಗೊಳ್ಳುವರು ಎಂದು ಜಿಪಂ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಯ್ಯ ಕೊರವನವರ, ತಹಸೀಲ್ದಾರ್ ಶ್ರೀನಿವಾಸಮೂರ್ತಿ ಕುಲಕರ್ಣಿ ಸ್ವಾಗತ ಕೋರಿದ್ದಾರೆ

ಜಯಮೃತ್ಯುಂಜಯ ಶ್ರೀಗಳನ್ನು ಪೀಠದಿಂದ ಉಚ್ಚಾಟಿಸುವ ಮುಖಂಡರ ಹೇಳಿಕೆ । ನರಗುಂದ ಶಾಸಕ ಸಿ.ಸಿ ಪಾಟೀಲ ಪ್ರತಿಕ್ರಿಯೆ

# ಶ್ರೀಗಳ ಹೆಸರಿನಲ್ಲಿ ಮಠ ಕಟ್ಟುತ್ತೇವೆ

■ವಿಜಯಸಾಕ್ಷಿ ಸುದ್ದಿ, ಗದಗ

ಕೆಲ ಮುಖಂಡರು ಜಯಮೃತ್ಯುಂಜಯ ಸ್ವಾಮೀಜಿಗಳನ್ನು ಪೀಠದಿಂದ ಉಚ್ಚಾಟನೆ ಮಾಡುವ ಬೆದರಿಕೆ ಹಾಕಿದ್ದಾರೆ. ಸಮಾಜದ ಹೆಸರಿನಲ್ಲಿ ಆಸ್ತಿ ಕಬಳಿಸಿದವರು ಬೇಕಾದರೆ ಕೂಡಲಸಂಗಮ ಮಠವನ್ನು ತೆಗೆದುಕೊಳ್ಳಲಿ. ಆದರೆ ಸಮಾಜ ಬಾಂಧವರೆಲ್ಲಾ ದೇಣಿಗೆ ಸಂಗ್ರಹಿಸಿ ಕೂಡಲಸಂಗಮದಲ್ಲೇ ಜಯಮೃತ್ಯುಂಜಯ ಶ್ರೀಗಳ ಹೆಸರಿನಲ್ಲಿ ಮಠ ಕಟ್ಟುತ್ತೇವೆ. ಕೂಡಲಸಂಗಮ ಸ್ವಾಮೀಜಿಗಳು ಸಮಾಜಕ್ಕಾಗಿ ಪೀಠ ತ್ಯಾಗ ಮಾಡಿ, ಭಕ್ತರ ಮನೆಯಲ್ಲೇ ಇದ್ದು ಸಂಘಟನೆ ಮಾಡುತ್ತಿದ್ದಾರೆ. ಅಂಥ ಪೂಜ್ಯರ ಬಗ್ಗೆ ಮಾತನಾಡುವುದು ಸರಿಯಲ್ಲ ಎಂದು ನರಗುಂದ ಶಾಸಕ ಸಿ.ಸಿ. ಪಾಟೀಲ ಹೇಳಿದರು.

ಶನಿವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಮುರುಗೇಶ ನಿರಾಣಿ ಹೊರತುಪಡಿಸಿ ಈಚೆಗೆ ಸಭೆ ನಡೆಸಿದವರನ್ನು ಒಮ್ಮೆ ಗಮನಿಸಿದರೆ, 2ಎ ಮೀಸಲಾತಿ ಹೋರಾಟದಲ್ಲಿ ಭಾಗಿಯಾಗದೆ, ಸಮಾಜಕ್ಕಾಗಿ




ದಾನ-ಧರ್ಮ ಮಾಡದವರು ಕೂಡ ಜಯಮೃತ್ಯುಂಜಯ ಶ್ರೀಗಳ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಆರೋಪಿಸಿದರು.

ವಿಜಯಾನಂದ ಕಾಶಪ್ಪನವರ 2ಎ ಮೀಸಲಾತಿ ಸಂದರ್ಭದಲ್ಲಿ ಬಾರಕೋಲ ಚಳವಳಿ ಮಾಡಿದರು. ಮಲಗಿದ್ದಾಗಲೂ ಬಾರಕೋಲು ಹಾಕಿಕೊಂಡೇ ಮಲಗಿದರು. ಅಂದಿನ ಸಿಎಂ ಬಸವರಾಜ ಬೊಮ್ಮಾಯಿ ಮನೆ ಮುಂದೆ ಪ್ರತಿಭಟನೆ ಮಾಡಿದರು. ನಾನು ಸರಕಾರದ ಮಂತ್ರಿಯಾಗಿ ಸಮಾಜ ಮತ್ತು ಸರಕಾರದ ಮಧ್ಯೆ ಕೊಂಡಿಯಾಗಿ ಕೆಲಸ ಮಾಡಿ, ಮೀಸಲಾತಿ ಜಾರಿಗೆ ಪ್ರಯತ್ನ ಮಾಡಿದೆ. ಆದರೆ ಯಾವಾಗ ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ಕೂಡಲೇ ಕಾಶಪ್ಪನವರ ಬಾರಕೋಲ ಮಾಯವಾಗಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮದೇ ಸಚಿವ ಸಂಪುಟದ ಸದಸ್ಯರ ವಿರೋಧದ ಮಧ್ಯೆಯೂ ಜಾತಿ ಜನಗಣತಿ ವರದಿ ಮಂಡಿಸಿದ್ದಾರೆ. ಈವರೆಗೆ ನನ್ನ ಮನೆಗೆ ಯಾರೊಬ್ಬರೂ ಜಾತಿ ಜನಗಣತಿ ಸಮೀಕ್ಷೆಗೆ ಬಂದಿಲ್ಲ. ಕನಿಷ್ಠಪಕ್ಷ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಚಿವ ಎಚ್.ಕೆ. ಪಾಟೀಲರ ಮನೆಗೆ ಯಾರು ಸಮೀಕ್ಷೆಗೆ ಬಂದಿದ್ದರು ಎನ್ನುವುದನ್ನು ಸ್ಪಷ್ಟಪಡಿಸಲಿ ಎಂದು ಸವಾಲು ಹಾಕಿದರು.

ಜಾತಿ ಜನಗಣತಿ ವರದಿಯನ್ನು ಅಧ್ಯಯನ ಮಾಡಲು ಸಚಿವರಿಗೆ ಪ್ರತಿಗಳನ್ನು ನೀಡಿದ್ದಾರೆ. ಸಂಖ್ಯಾಬಲ ಇದೆ ಎನ್ನುವ ಕಾರಣಕ್ಕೆ ಸಿದ್ದರಾಮಯ್ಯ ತರಾತುರಿಯಲ್ಲಿ ನಿರ್ಧಾರ ಕೈಗೊಂಡರೆ, ಅದು ಭಸ್ಮಾಸುರನ ಬೆಂಬಲವಾಗುತ್ತದೆ. ಭಸ್ಮಾಸುರ ಎಲ್ಲರನ್ನು ಸುಟ್ಟು ಕೊನೆಗೆ ತಾನೇ ಸುಟ್ಟುಕೊಳ್ಳುತ್ತಾನೆ ಎನ್ನುವುದನ್ನು ಸಿದ್ದರಾಮಯ್ಯ ಅರ್ಥ ಮಾಡಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ರಾಜು ಕುರುಡಗಿ, ಮುಖಂಡರಾದ ಮೋಹನ ಮಾಳಶೆಟ್ಟಿ, ವಿಜಯಕುಮಾರ ಗಡ್ಡಿ, ಸಿದ್ದು ಪಲ್ಲೇದ, ಎಂ.ಎಂ. ಹಿರೇಮಠ, ಅಯ್ಯಪ್ಪ ಅಂಗಡಿ ಇತರರು ಉಪಸ್ಥಿತರಿದ್ದರು.

> ಜಾತಿ ಜನಗಣತಿ ಸಂಪೂರ್ಣ ಅವೈಜ್ಞಾನಿಕವಾಗಿದೆ. ಲಂಬಾಣಿ ಜನಾಂಗವೇ ಇಲ್ಲದ ಕ್ಷೇತ್ರದಲ್ಲಿ 4 ಸಾವಿರ ಜನಸಂಖ್ಯೆ ಇದೆ ಎಂದು ವರದಿಯಲ್ಲಿ ಉಲ್ಲೇಖವಾಗಿದೆ. ಇನ್ನು ಈಳಿಗೇರ ಸಮಾಜದ ಜನರೇ ಇಲ್ಲದ ಕ್ಷೇತ್ರದಲ್ಲಿ 3 ಸಾವಿರ ಜನರಿದ್ದಾರೆ ಎಂದಿದೆ. ಇಂಥ ವರದಿಯಿಂದ ಯಾರಿಗೆ ಅನ್ಯಾಯವಾಗುತ್ತದೆ ಎನ್ನುವ ಬಗ್ಗೆ ಕಾಂಗ್ರೆಸ್ ಚಿಂತನೆ ಮಾಡುತ್ತಿಲ್ಲ ಎಂದು ಶಾಸಕ ಸಿ.ಸಿ. ಪಾಟೀಲ ಟೀಕಿಸಿದರು.

## ಪ್ರತಿಯೊಬ್ಬರಿಗೂ ಕಾನೂನು ಅರಿವು ಅಗತ್ಯ




**■ವಿಜಯಸಾಕ್ಷಿ ಸುದ್ದಿ, ಗದಗ**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದುಕುತ್ತಿರುವ ನಮಗೆ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗದ ಜ್ಞಾನ ಅವಶ್ಯವಾಗಿದೆ. ನಮ್ಮಿಂದ ಚುನಾಯಿತರಾದ ಪ್ರತಿನಿಧಿಗಳ ಸಭೆಯಾಗಿರುವ ಶಾಸಕಾಂಗವು ಕಾನೂನುಗಳನ್ನು ರಚಿಸುವ ಸರ್ಕಾರದ ಶಾಖೆಯಾಗಿದೆ. ಈ ಕಾನೂನುಗಳ ಮೂಲಕ ನ್ಯಾಯಾಂಗವು ವಿವಾದ, ಭಿನ್ನಾಭಿಪ್ರಾಯಗಳನ್ನು ನಿರ್ಣಯಿಸುವ ಮತ್ತು ಕಾನೂನು ಪ್ರಕರಣಗಳಲ್ಲಿ ಕಾನೂನನ್ನು ವ್ಯಾಖ್ಯಾನಿಸುವ, ಸಮರ್ಥಿಸುವ ಮತ್ತು ಅನ್ವಯಿಸುವ ಕಾರ್ಯ ಮಾಡುತ್ತದೆ. ಕಾರ್ಯಾಂಗವು ಶಾಸಕಾಂಗ ಜಾರಿಗೊಳಿಸಿದ ಕಾನೂನುಗಳನ್ನು ಕಾರ್ಯಗತಗೊಳಿಸುವ ಮತ್ತು ರಾಜ್ಯದ ಇಚ್ಛೆಯನ್ನು ಪೂರೈಸುತ್ತದೆ ಎಂದು ರಾಜ್ಯಶಾಸ್ತ್ರ ಪ್ರಾಧ್ಯಾಪಕ ಪ್ರೊ. ಹುಸೇನಭಾಷಾ ಹೇಳಿದರು.

ಅವರು ಹುಲಕೋಟಿಯ ಕೆ.ಎಚ್. ಪಾಟೀಲ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಎನ್.ಎಸ್.ಎಸ್. ಘಟಕವು ಹಮ್ಮಿಕೊಂಡಿರುವ ವಾರ್ಷಿಕ ವಿಶೇಷ ಶಿಬಿರದ ಉಪನ್ಯಾಸ ಕಾರ್ಯಕ್ರಮದಲ್ಲಿ 'ದೈನಂದಿನ ಬದುಕಿನಲ್ಲಿ ಕಾನೂನು' ಕುರಿತು ಮಾತನಾಡಿದರು.

ಗಣಿತಶಾಸ್ತ್ರದ ಪ್ರಾಧ್ಯಾಪಕ ಪ್ರೊ. ಬಸವರಾಜ ಬಳಗಾನೂರಮಠ ಮಾತನಾಡಿ, ನಮ್ಮ ದೈನಂದಿನ ಬದುಕಿಗೆ ಅವಶ್ಯವಿರುವ ಕಾನೂನುಗಳ ಸಾಮಾನ್ಯ ಪರಿಚಯ ನಮಗಿದ್ದಾಗ ಸಹಜವಾಗಿ ತಪ್ಪುಗಳು ಕಡಿಮೆಯಾಗುತ್ತವೆಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಬಸವರಾಜ ಅಂಬಿಗೇರ ಮಾತನಾಡಿ, ಇತ್ತೀಚೆಗೆ ಸೈಬರ್ ಅಪರಾಧಗಳು ಹೆಚ್ಚುತ್ತಿದ್ದು, ತಂತ್ರಜ್ಞಾನಗಳ ಬಳಕೆ ಸಂದರ್ಭದಲ್ಲಿ ಜಾಗರೂಕರಾಗಿರಬೇಕೆಂದು ಹೇಳಿದರು.

ಎನ್.ಎಸ್.ಎಸ್. ಸಂಯೋಜಕ ಡಾ. ಅಪ್ಪಣ್ಣ ಹಂಜೆ ವಿದ್ಯಾರ್ಥಿಗಳು ನಮ್ಮ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಕುರಿತು ಓದಿಕೊಳ್ಳಬೇಕೆಂದು ಹೇಳಿದರು. ಸಹ ಸಂಯೋಜಕ ಪ್ರೊ. ವಿಜಯಕುಮಾರ ಎಸ್ ಅತಿಥಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸ್ವಯಂ ಸೇವಕರು ಕಾರ್ಯಕ್ರಮ ನಿರ್ವಹಿಸಿದರು.

## ಒಂದು ಜಾತಿ, ಧರ್ಮವನ್ನು ಕಮ್ಮಿ ತೋರಿಸುವ ಕೆಲಸ ಮಾಡಬಾರದು



**■ವಿಜಯಸಾಕ್ಷಿ ಸುದ್ದಿ, ಬೆಳಗಾವಿ**

ಒಂದು ಜಾತಿ, ಧರ್ಮವನ್ನು ಕಮ್ಮಿ ತೋರಿಸುವ ಕೆಲಸ ಮಾಡಬಾರದು ಎಂದು ಸಂಸದ ಜಗದೀಶ್ ಶೆಟ್ಟರ್ ಜಾತಿ ಗಣತಿ ವರದಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬೆಳಗಾವಿಯಲ್ಲಿ ಮಾತನಾಡಿದ ಅವರು, ಈ ವರದಿಯಲ್ಲಿ ನೈಜತೆ ಇಲ್ಲ. ವೈಜ್ಞಾನಿಕವಾಗಿ ಜಾತಿ ಗಣತಿಯಾಗಬೇಕು. ಒಂದು ಜಾತಿ, ಧರ್ಮವನ್ನು ಕಮ್ಮಿ ತೋರಿಸುವ ಕೆಲಸ ಮಾಡಬಾರದು. ಇದಕ್ಕೆ ನಮ್ಮ ವಿರೋಧವಿದೆ ಎಂದು ಹೇಳಿದ್ದಾರೆ. ಜಾತಿ ಗಣತಿ ಬಗ್ಗೆ ಸಂಪುಟದಲ್ಲಿ ಒಪ್ಪಿಗೆ ಕೊಟ್ಟಿದ್ದಾರೆ. ಅಲ್ಲದೇ ಎ.17ರಂದು ವಿಸ್ತೃತ ಚರ್ಚೆಗೆ ಸಂಪುಟ ಸಭೆ ಕರೆದಿದ್ದಾರೆ.

ಆದರೆ, ಈ ವರದಿಯೇ ಗೊಂದಲದಿಂದ ಕೂಡಿದೆ. ಪ್ರತಿಯೊಬ್ಬರ ಮನೆಗೆ ಹೋಗಿಲ್ಲ ಎಂಬ ಆರೋಪ ಕೇಳಿಬರುತ್ತಿದೆ. ಅದೇ ರೀತಿ ಡಿಸಿಎಂ ಡಿ.ಕೆ. ಶಿವಕುಮಾರ ಹಾಗೂ ಸಚಿವರ ನಿಲುವು ಏನೆಂಬುದು ಇನ್ನೂ ಸ್ಪಷ್ಟವಾಗಿಲ್ಲ ಎಂದು ಶೆಟ್ಟರ್ ಹೇಳಿದ್ದಾರೆ.

## ಏಕಾಏಕಿ ಹೊತ್ತಿ ಉರಿದ ಎಲೆಕ್ಟ್ರಿಕ್ ಬೈಕ್: ತಪ್ಪಿದ ಭಾರೀ ಅನಾಹುತ!



**■ವಿಜಯಸಾಕ್ಷಿ ಸುದ್ದಿ, ದೊಡ್ಡಬಳ್ಳಾಪುರ**

ಅಂಗಡಿ ಮುಂಭಾಗ ನಿಲ್ಲಿಸಿದ್ದ ಬೈಕ್ ಏಕಾಏಕಿ ಹೊತ್ತಿ ಉರಿದ ಘಟನೆ ದೊಡ್ಡಬಳ್ಳಾಪುರ ನಗರದ ವಾಸವಿ ಕಲ್ಯಾಣ ಮಂಟಪದ ಸಮೀಪ ನಡೆದಿದೆ. ದೊಡ್ಡಬಳ್ಳಾಪುರದ ಚಂದ್ರಶೇಖರ್ ಎಂಬುವರಿಗೆ ಸೇರಿದ ಎಲೆಕ್ಟ್ರಿಕ್ ವಾಹನ ಇದಾಗಿದ್ದು, ಕಳೆದ ನಾಲ್ಕು ವರ್ಷಗಳ ಹಿಂದೆ ಜಪಾನ್ ಮೂಲದ ಎಲೆಕ್ಟ್ರಿಕ್ ಬೈಕ್ ಖರೀದಿಸಿದ್ದರು.

ಇತ್ತೀಚೆಗಷ್ಟೆ ನೂತನ ಬ್ಯಾಟರಿಯನ್ನು ಚಂದ್ರಶೇಖರ್ ಹಾಕಿಸಿದ್ದರು. ಇದೀಗ ಅಂಗಡಿ ಮುಂದೆ ನಿಲ್ಲಿಸಿದ ನಂತರ ಏಕಾಏಕಿ ಬೆಂಕಿ ಹೊತ್ತಿಕೊಂಡು ಸಂಪೂರ್ಣ ಸುಟ್ಟು ಕರಕಲಾಗಿದೆ.

ಮುಖ್ಯ ರಸ್ತೆಯಲ್ಲಿ ದಟ್ಟವಾಗಿ ಹೊಗೆ ಆವರಿಸಿದ್ದರಿಂದ ಸ್ಥಳೀಯರಲ್ಲಿ ಆತಂಕವಾಗಿದ್ದು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

### ಗದುಗಿನ ತೋಂಟದಾರ್ಯ ಮಠದ ಜಾತ್ರೆಯ ನಿಮಿತ್ತ ವಿಶೇಷ ಲೇಖನ

# ಕನ್ನಡದ ಕುಲ-ಗೋತ್ರಕ್ಕೆಲ್ಲಾ ಒಂದೇ ತೇರು

ಗದುಗಿನ ತೋಂಟದಾರ್ಯ ಮಠ ತನ್ನದೇ ಆದ ವಿಶೇಷತೆಗಳನ್ನು ಹೊಂದಿದ್ದು, ಎಲ್ಲಾ ಮಠಗಳ ಹಾಗೆ ಇರದೆ ಭಿನ್ನವಾಗಿ ಕಂಡುಬರುತ್ತದೆ. ಕಾರಣ 12ನೇ ಶತಮಾನದ ಬಸವ ತತ್ವಗಳನ್ನು ಅಕ್ಷರಶಃ ಪಾಲಿಸಿಕೊಂಡು ಬಂದಿರುವ ಮಠ ಇದಾಗಿದೆ. 15ನೇ ಶತಮಾನದಲ್ಲಿ ಬದುಕಿ ಬಾಳಿದ ಶಿವಯೋಗಿ ಸೂರ್ಯ ತೋಂಟದ ಸಿದ್ಧಲಿಂಗ ಯತಿಗಳ ನೇರ ವಾರಸುದಾರಿಕೆಯ ಮಠ. ಸಮಾಜದಲ್ಲಿ ಅಶಾಂತಿಯನ್ನೆಬ್ಬಿಸುವ, ಜನರಲ್ಲಿ ವೈಮನಸ್ಸು ಮೂಡಿಸುವ, ಭಿನ್ನತೆಯ ಗೋಡೆಗಳನ್ನು ಕೆಡವಿ ವಿಶ್ವ ಮಾನವ ತತ್ವ ಸಾರಿದವರು ಡಾ. ತೋಂಟದ ಸಿದ್ಧಲಿಂಗ ಶ್ರೀಗಳು.

1974ನೇ ಜುಲೈ 29ರಂದು ಶ್ರೀಮಠದ 19ನೇ ಪೀಠಾಧಿಕಾರಿಗಳಾಗಿ ಅಧಿಕಾರವನ್ನು ಸ್ವೀಕರಿಸಿ, ಹಲವು ಕಷ್ಟದ ದಿನಗಳನ್ನು ಎದುರಿಸಿ ಭಕ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು, 'ಮಠದ ಶ್ರೀಮಂತಿಕೆಯನ್ನು ನೋಡಿ ಬಂದಿಲ್ಲ. ಭಕ್ತರ ಮನಸ್ಸಿನ ಶ್ರೀಮಂತಿಕೆ ನೋಡಿ ಬಂದೀನಿ' ಎಂದು ಭಕ್ತರ ಮುಖದಲ್ಲಿ ಲಿಂಗವ ಕಾಣಬೇಕು ಎಂದು ತಿಳಿದು ಸ್ವತಃ ತಾವೇ ಗುದ್ದಲಿ ಹಿಡಿದು ಬಾವಿ ತೋಡಿ, ಕಾಯ ಮತ್ತು ಕಾಯಕದಿಂದ ಗುರು, ಲಿಂಗ, ಜಂಗಮವನ್ನು ಕಂಡವರು. ಶ್ರೀಗಳು ರಕ್ತ-ಬೆವರನ್ನು ಮಠದ ಬೆಳವಣಿಗೆಗಾಗಿ ಮೀಸಲಿಟ್ಟವರು.

ಮಾತೃ ಹೃದಯಿ, ಮಾನವೀಯ ಮೌಲ್ಯಗಳನ್ನು ಹೊಂದಿದ ಶ್ರೀಗಳು, ಮಠಕ್ಕೆ ಯಾವುದೇ ಕಷ್ಟವನ್ನು ಹೇಳಿಕೊಂಡು ಬಂದ ಭಕ್ತರನ್ನು ಹಾಗೆಯೇ ಕಳಿಸಿದ ಮಾತೇ ಇಲ್ಲ. ತಮ್ಮ ಮಠದಿಂದ ಸಾಧ್ಯವಾದ ಸಹಾಯವನ್ನು ನೀಡಿ ನೊಂದ ಮನುಸುಗಳಿಗೆ ಬೆಳಕಾಗಿ ನಿಂತರು. ಎಷ್ಟರ ಮಟ್ಟಿಗೆ ಎಂದರೆ, ತಮ್ಮ ಗುರುಗಳಾದ ಸಿಂದಗಿಯ ಪಟ್ಟಾಧ್ಯಕ್ಷರು ಗುಂಜಿ-ಗುಂಜಿ ಬಂಗಾರವನ್ನು ಸೇರಿಸಿ ಮಾಡಿಕೊಟ್ಟಿದ್ದ ನಂದಿ ಉಂಗುರ ಕರುಳಿಗೆ ಸಂಬಂಧಿಸಿದ ಆಸ್ತಿಯಾಗಿತ್ತು. ಆದರೆ, ನಿರ್ಮೋಹಿಗಳಾದ ಶ್ರೀಗಳು ಅದನ್ನು ಮಾರಿ ಭಕ್ತರಿಗೆ ಸಹಾಯ ಮಾಡಿದ್ದರು. ಶಿವಾನುಭವವನ್ನು ಮಠದಲ್ಲಿ ಪ್ರಾರಂಭಿಸಿ ಒಂದು ವಾರವೂ ನಿಲ್ಲದೆ ಸತತ 50 ವರ್ಷಗಳನ್ನು ಪೂರೈಸಿರುವುದು ಸುವರ್ಣಾಕ್ಷರದ



ಇತಿಹಾಸವನ್ನು ಪಡೆದಿದೆ.

ಒಂದು ವಿಶ್ವವಿದ್ಯಾಲಯ ಮಾಡದ ಕೆಲಸವನ್ನು ಶ್ರೀಮಠದ ಡಾ. ಎಂ.ಎಂ. ಕಲಬುರ್ಗಿ ಲಿಂಗಾಯತ ಅಧ್ಯಯನ ಸಂಸ್ಥೆ ಮಾಡಿ, 400ಕ್ಕಿಂತ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿತು. ಡಾ. ಸಿದ್ಧಲಿಂಗ ಮಹಾಸ್ವಾಮಿಗಳು ಜನಸಾಮಾನ್ಯರಿಗೂ ಅವಕಾಶಗಳನ್ನು ನೀಡಿ ಪುಸ್ತಕಗಳನ್ನು ಬರೆಸಿದರು. ನಾಲ್ಕನೆಯ ವರ್ಗ ಓದಿದ ರಾಮಣ್ಣ ಬ್ಯಾಟಿ ಅವರು ಬರೆದ ಪುಸ್ತಕಗಳೇ ಇದಕ್ಕೆ ಸಾಕ್ಷಿಯಾಗಿವೆ. 'ಹಳ್ಳಿಗೆ ಏಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿ' ಎಂಬಂತೆ ನಿರಂತರ ಸಮಾಜ ಸೇವೆಗಾಗಿ ಸಂಚರಿಸಿ ನಾಡನ್ನು ಸುತ್ತಿ ಜನರಲ್ಲಿ ವೈಚಾರಿಕ ಪ್ರಜ್ಞೆಯನ್ನು ಬಿತ್ತಿದರು.

ಗೋಕಾಕ ವರದಿ, ಕನ್ನಡ ಶಾಸ್ತ್ರೀಯ ಸ್ಥಾನಮಾನದ ಹೋರಾಟ ಹೀಗೆ ಹಲವಾರು ಹೋರಾಟಗಳಲ್ಲಿ ಭಾಗಿಯಾಗಿ ನೆಲ-ಜಲವನ್ನು ಉಳಿಸಿದವರು ಪರಮ ಪೂಜ್ಯರು. ಹೀಗೆ ಜನ ಬೆಂಬಲವಾಗಿ ನಿಂತು, ತ್ರಿವಿಧ ದಾಸೋಹಿಗಳಾಗಿ, ಬಸವಣ್ಣನವರ ವಿಚಾರಧಾರೆಗಳಲ್ಲಿ ಅಚಲ ನಂಬಿಕೆಯನ್ನಿಟ್ಟು ಶರಣರ ವಚನಗಳನ್ನು ಸರಳವಾಗಿ ಹೇಳುತ್ತಾ ವೈಚಾರಿಕತೆಯನ್ನು ಪಸರಿಸಿ ಪ್ರಗತಿಪರ ಸ್ವಾಮೀಜಿಗಳಾಗಿ, ಭಾವೈಕ್ಯತೆಯ ಹರಿಕಾರರಾಗಿ 2018 ಅಕ್ಟೋಬರ್ 20ರಂದು ಬಯಲಲ್ಲಿ ಬಯಲಾದರು.

ಆದರೆ ಅವರು ಹಾಕಿಕೊಟ್ಟ ಮಾರ್ಗ ಅಚ್ಚಳಿಯದಂತಹದ್ದು. ಸ್ವಾಮೀಜಿಯವರು ಹಾಕಿ ಕೊಟ್ಟ ಮಾರ್ಗದಲ್ಲಿಯೇ ಶ್ರೀಮಠದ ಜಾತ್ರೆಯು ನಡೆದುಕೊಂಡು ಬಂದಿದೆ. ಕೇವಲ ಜಾತ್ರೆ-ಜಾತ್ರೆಯಾಗಿರದೆ ತೋಂಟದಾರ್ಯ ಮಠದ ಜಾತ್ರೆಯು ವೈಚಾರಿಕ ಕ್ರಾಂತಿಯನ್ನುಂಟುಮಾಡಿದೆ. ಈ ಜಾತ್ರೆಯಲ್ಲಿ ತೇರಿಗೆ ಅನ್ನವನ್ನು ಸುರಿಯುವುದಿಲ್ಲ, ಸ್ವಾಮೀಜಿಯ ಅಡ್ಡಪಲ್ಲಕ್ಕಿ ಸೇವೆ ನಡೆಯುವುದಿಲ್ಲ. ತೇರು ಸಾಗಿದಷ್ಟು ದೂರ ಜನ ಸಾಮಾನ್ಯರ ಜೊತೆಗೆ ಕಾಲ್ನಡಿಗೆಯಲ್ಲೇ ಸ್ವಾಮೀಜಿಗಳು ಸಾಗುವ ಮೂಲಕ ಹೊಸ ಪರಂಪರೆಯನ್ನು ಹುಟ್ಟು ಹಾಕಿದರು.

ಮಠದ ಜಾತ್ರೆ ಎಂದರೆ ಅದೊಂದು ಧಾರ್ಮಿಕ ಕಾರ್ಯಕ್ರಮಗಳಿಂದ ಕೂಡಿದರೆ, ಜಾತ್ರೆ ಎಂದರೆ ಅದು ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ತಿಕವಾಗಿರಬೇಕೆಂದು ಜಾತ್ರೆಗೆ ಒಂದು ಹೊಸ ಸ್ಪರ್ಶವನ್ನು ನೀಡಿದ ಕೀರ್ತಿ ಡಾ. ತೋಂಟದ ಸಿದ್ಧಲಿಂಗ ಶ್ರೀಗಳಿಗೆ ಸಲ್ಲುತ್ತದೆ. ಜಾತ್ರೆ ಒಂದು ಜನಾಂಗಕ್ಕೆ ಸೀಮಿತವಾಗಬಾರದೆಂದು ಸರ್ವಧರ್ಮದವರು ಪಾಲ್ಗೊಳ್ಳುವಂತೆ ಮಾಡಿ ಜಾತ್ರೆಯನ್ನು ಜನಮುಖಿಗೊಳಿಸಿದ ಕೀರ್ತಿ ಶ್ರೀಗಳ ಸಾಧನೆಯೇ ಸರಿ. ಪ್ರತಿ ವರ್ಷ ನಡೆಯುವ ಜಾತ್ರೆಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಕಾರ್ಯಕ್ರಮಗಳ ಮೂಲಕ ಜನ ಸಾಮಾನ್ಯರಲ್ಲಿ ವೈಚಾರಿಕ ಪ್ರಜ್ಞೆಯನ್ನು ಮೂಡಿಸುವ ಜಾತ್ರೆಯೇ ನಮ್ಮ ಗದುಗಿನ ಶ್ರೀಮಠದ ಜಾತ್ರೆಯಾಗಿದೆ.

ಈ ಜಾತ್ರೆ ಕೇವಲ ತೇರು ಎಳೆಯುವ ದಿನವಾಗಿರದೆ, ಜಾತ್ರೆಯಲ್ಲಿ ಜಾನುವಾರು ಮೇಳ, ಕೃಷಿ ಮೇಳ, ಉಚಿತ ಆರೋಗ್ಯ ತಪಾಸಣಾ ಶಿಬಿರ, ಯೋಗ ಶಿಬಿರ, ಸಿರಿಧಾನ್ಯ ಶಿಬಿರ, ಕ್ರೀಡೆ, ವಚನ ಸ್ಪರ್ಧೆ, ವ್ಯಸನ ಮುಕ್ತ ಸಮಾಜಕ್ಕಾಗಿ ಪಾದಯಾತ್ರೆ, ಭಾವಕ್ಯತಾ ದಿನ ಹೀಗೆ ಹಲವಾರು ಕಾರ್ಯಕ್ರಮಗಳನ್ನು ಶ್ರೀಮಠದ ಜಾತ್ರೆಯಲ್ಲಿ ನಡೆಸುವುದರ ಮುಖಾಂತರ ಜಾತ್ರೆಗೆ ಹೊಸ ರೂಪವನ್ನು ನೀಡಿದೆ. ಇಂದಿಗೂ ಶ್ರೀಮಠದ ಜ. ಡಾ. ತೋಂಟದ ಸಿದ್ದರಾಮ ಮಹಾಸ್ವಾಮಿಗಳು ಹಿರಿಯ ಶ್ರೀಗಳ ಆಶಯದಂತೆ ತತ್ವ ಪಾಲನೆಯನ್ನು ನಡೆಸಿಕೊಂಡು ಸಾಗುತ್ತಿದ್ದಾರೆ.

ಕನ್ನಡದ ನಡೆ ತೇರ
ಕನ್ನಡ ನುಡಿ ತೇರ
ಕನ್ನಡ ಉಸಿರಾಗಿರುವ ತೇರ
ಕನ್ನಡದ ಕುಲಗೋತ್ರಕ್ಕೆಲ್ಲಾ ಒಂದೇ ತೇರ
ನಮ್ಮ ತೋಂಟದಾರ್ಯ ಮಠದ ತೇರ

ಇಂತಹ ವೈಭವದ ನಮ್ಮೂರ ಜಾತ್ರೆ ತೋಂಟದ ಜಾತ್ರೆಗೆ ನೀವೂ ಬನ್ನಿ, ನಿಮ್ಮವರನ್ನೂ ಕರೆತನ್ನಿ.



**- ಪ್ರೊ. ಸಿದ್ದಲಿಂಗೇಶ ಸಜ್ಜನಶೆಟ್ಟರ. ಗದಗ.**

### ಭಾವೈಕ್ಯತೆಯ ತೋಂಟದಾರ್ಯ ಮಠದ ಐತಿಹಾಸಿಕ ಪರಂಪರೆ

# ಜನಸಾಮಾನ್ಯರ ಸ್ವಾಮೀಜಿ

ತ್ರಿವಿಧ ದಾಸೋಹಿ, ಕೋಮು ಸೌಹಾರ್ದತೆಯ ಹರಿಕಾರ, ಕ್ರಾಂತಿಯೋಗಿ, ಕಾರುಣ್ಯದ ಕಡಲು, ಕಲಾಪ್ರೇಮಿ, ಸಮಾಜ ವಿಜ್ಞಾನಿ, ಕರ್ನಾಟಕದ ಸ್ವಾಮಿ ವಿವೇಕಾನಂದ, ಆಧುನಿಕ ಬಸವಣ್ಣ, ಅಭಿನವ ಅಲ್ಲಮಪ್ರಭು, ನೇರ-ನಿಷ್ಠುರ ನುಡಿ, ದಿಟ್ಟ ನಿಲುವಿನ ದಾರ್ಶನಿಕರು, ಇತಿಹಾಸ ನಿರ್ಮಾಪಕರು, ಸಾಮಾಜಿಕ ಹಿತಚಿಂತಕರು, ಸೌಹಾರ್ದ ಪ್ರಿಯರು, ಕಾಯಕ ಯೋಗಿವರ್ಯರು, ಕನ್ನಡ ಜಗದ್ಗುರು ಎಂದೇ ಖ್ಯಾತರಾಗಿರುವ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರ ಅಸಾಧಾರಣ ಕೊಡುಗೆ, ಐತಿಹಾಸಿಕ ಪರಂಪರೆ ದಾಖಲಾರ್ಹವಾದುದು.

ವಿರಕ್ತ ಪೀಠದ ಪರಂಪರೆಯ ತಾಯಿಬೇರು ಯಡಿಯೂರು ತೋಂಟದ ಸಿದ್ಧಲಿಂಗ ಶಿವಯೋಗಿಗಳವರು. ಅವರ ಬಳಿ ಬೆಳೆದುಬಂದ ಮಠ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ. ಈ ಮಠದ 19ನೇ ಪೀಠಾಧಿಕಾರಿಗಳಾಗಿ 1974 ಜುಲೈ 29ರಂದು ಅಧಿಕಾರ ವಹಿಸಿಕೊಂಡ ಪೂಜ್ಯ ಡಾ. ತೋಂಟದ ಸಿದ್ಧಲಿಂಗ ಸ್ವಾಮಿಗಳವರು ಆರಂಭದ ದಿನದಿಂದಲೇ ಅಪಾರರೂಪದ ಸವಾಲುಗಳನ್ನು ಎದುರಿಸಿದ ಧೀಮಂತರು.


ಪೀಠಕ್ಕೆ ಬರುವ ಪೂರ್ವದಲ್ಲಿ ಹೊಯ್ದಾಟವಿದ್ದರೂ ಕೂಡ ಬಂದ ನಂತರ ಗುರುತರ ಹೊಣೆ ನಿಭಾಯಿಸುತ್ತಾ ದೃಢ ನಿಶ್ಚಯವುಳ್ಳವರಾಗಿ ಮಠದ ಭಕ್ತರ ಶ್ರೇಯೋಭಿವೃದ್ಧಿಗಾಗಿ ಅನೂಚಾನವಾಗಿ ಕಷ್ಟಸಹಿಷ್ಣುವಾಗಿ ಶ್ರಮಿಸಿದ್ದಲ್ಲದೆ, ಅಶಕ್ತ, ಅವಕಾಶ ವಂಚಿತ ಅನೇಕ ಸಮುದಾಯಗಳ ಉನ್ನತಿಗಾಗಿ



ನಾಡು-ನುಡಿ-ಗಡಿ ಸಂವರ್ಧನೆಗಾಗಿ ಪ್ರಾಣಿ-ಪರಿಸರ, ಜಲ ಸ್ಥಿರತೆಗಾಗಿ ತುಂಬಾ ಗಟ್ಟಿಯಾದ ಒಕ್ಕೊರಲಿನ ಧ್ವನಿ ಎತ್ತಿ ಸಿಂಹಘರ್ಜನೆಗೈದವರು. ಪೂಜ್ಯರ ಜೀವಪರ ಕಾಳಜಿಯನ್ನು ಕಂಡ ನಾಡ ಜನತೆ ಶ್ರೀಮಠದತ್ತ ಧಾವಿಸಿ ಬರಲಾರಂಬಿಸಿದ್ದು ಸುವರ್ಣ ಅಕ್ಷರಗಳಲ್ಲಿ ಬರೆದಿರುವಂತಹ ಸಂಗತಿ. ಜನಮನದ ಶಕ್ತಿಯಸ್ವರೂಪಕ್ಕೆ ಶಿವರೂಪವನ್ನಿತ್ತ ಪೂಜ್ಯರು ಸಾಮಾನ್ಯರಲ್ಲಿ ಸಾಮಾನ್ಯರಾದವರಿಂದ ಅಸಾಧಾರಣ ಕಾರ್ಯಗಳು ಯಶಸ್ವಿಯಾಗುವಂತೆ ಹುರಿದುಂಬಿಸಿದವರು.

ಪೂಜ್ಯರ 44 ವರ್ಷಗಳ ಸುದೀರ್ಘ ಸೇವಾಧಿಕಾರದ ಹಿರಿಮೆ-ಗರಿಮೆ ಕುರಿತು ಹಲವಾರು ಗ್ರಂಥಗಳು, ಕವನ ಸಂಕಲನ, ಕಾದಂಬರಿಗಳು ಇತ್ಯಾದಿಯಾಗಿ ಇಂದಿಗೂ ಪ್ರಕಟಗೊಳ್ಳುತ್ತಿರುವುದು ಅನುಭವಗೋಚರ ಸಂಗತಿ.

ನೆರೆಹಾವಳಿ, ಭೂಕಂಪ, ಬರಗಾಲದಂತಹ ಪ್ರಕೃತಿ ವಿಕೋಪ ಸನ್ನಿವೇಶದಲ್ಲಿ ಆಹಾರ, ದುಡ್ಡು, ಬಟ್ಟೆ ವಿತರಿಸಿ ಗಂಜಿಕೇಂದ್ರಗಳನ್ನು



ಸ್ಥಾಪಿಸಿ, ಪಶು ರಕ್ಷಣಾ ಗೋಶಾಲೆ ಕೇಂದ್ರಗಳನ್ನು ಸ್ಥಾಪಿಸಿದ ಶ್ರೀಗಳವರು ಮಾರಥವಾತ್ಸಲದ ಪ್ರತಿರೂಪಿಯೇ ಸರಿ.

ವೈಚಾರಿಕ ಚಿಂತನೆಗಳಿಂದಾಗಿ ಕೋಮು ಸೌಹಾರ್ದತೆಗಾಗಿ ಇಡೀ ದೇಶದಾದ್ಯಂತ ಸಂಚರಿಸಿ ಕೋಮುವಾದಿಗಳ ನಿದ್ದೆಗೆಡಿಸಿರುವ ಪೂಜ್ಯರು ಮಠದಲ್ಲಿ ಎಲ್ಲ ಜಾತಿ-ಮತ-ಧರ್ಮಗಳ ಜನರಿಗೂ ಸಮಾನವಾದ ಪ್ರಾತಿನಿಧ್ಯವಿತ್ತು ಸಾಮಾನ್ಯರ ಸ್ವಾಮೀಜಿ ಎಂದು ಜನಾದರಣೀಯರಾದವರು.

ಹಲವು ಸಾಹಿತ್ಯ ಪ್ರಕಟಣೆಯ ಯೋಜನೆಗಳ ಮೂಲಕ ಸಂಸ್ಕೃತಿಮುಖಿ ಸಮಾಜ ನಿರ್ಮಾಣಕ್ಕೆ ಕಟ್ಟಿಬದ್ಧವಾಗಿ ನಿಂತ ಖ್ಯಾತಿವಂತರು. ಸ್ವಚ್ಛ,ಶುದ್ಧ,ಪಾರದರ್ಶಕ ನಡೆ-ನುಡಿ ಸೇವೆಗಳ ಮೂಲಕ ನಾಡಿನ ಗಮನ ಸೆಳೆದಿರುವ ಡಾ. ಸಿದ್ಧಲಿಂಗ ಸ್ವಾಮೀಜಿಯವರು ಪುಸ್ತಕದಸ್ವಾಮೀಜಿ, ಜನಸಾಮಾನ್ಯರ ಸ್ವಾಮೀಜಿ ಎಂದೇ ಜನಜನಿತರಾದವರು.

ಸಮಾಜದ ಸರ್ವತೋಮುಖ ಪ್ರಗತಿಗಾಗಿ ಶ್ರಮಿಸಿದ ಸ್ವಾಮೀಜಿಯವರಿಗೆ ಅವರ ಅನುಪಮ, ಅಪೂರ್ವ ಕೊಡುಗೆಗಾಗಿ ಕಲ್ಬುರ್ಗಿ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್‌ನೊಂದಿಗೆ ಗೌರವಿಸಿದೆ. ಶ್ರೀಗಳವರ ಜಾತ್ಯಾತೀತ ನಿಲುವಿಗಾಗಿ ಹಲವು ಪ್ರಶಸ್ತಿ-ಗೌರವಗಳು ಪೂಜ್ಯರ ಕೊರಳನ್ನಲಂಕರಿಸಿ ತಮ್ಮ ಘನತೆ ವರ್ಧಿಸಿಕೊಂಡಿರುವುದು ಸರ್ವವಿಧಿತವಾದ ಸಂಗತಿ. ಕನ್ನಡ ಭಾಷೆ, ಸಂಸ್ಕೃತಿಗಳ ಉಳಿವು-ಬೆಳವಿನ ಕಾರ್ಯದಲ್ಲಿ ತೆ-ಽಡಗಿ ನೇರವಾಗಿ ಚಳುವಳಿಯಲ್ಲಿ ಧುಮುಕಿದ್ದು ದಾಖಲಾರ್ಹವಾದುದು. ಗಡಿಯಾರದಂತೆ ಶ್ರಮಿಸಿರುವ ದ್ಯೋತಕವಾಗಿ ಶ್ರೀಮಠವು ಸಾಹಿತ್ಯ, ಸಂಶೋಧನೆ, ಕಲೆ, ಸಂಸ್ಕೃತಿಯಂತಹ ಕಾ ಂ ು ್ ರ ್ ಂ ು ್ ೂ ೀ ಜ ನ ್ ಗ ್ ಳ್ ಜಂಗಮವಾಗದೇ ಹೋಗಿದ್ದರೆ ಕನ್ನಡದ ತೇರು ಎಂದೋ ಎಲ್ಲಿಯೋ ಸ್ಥಾವರಗೊಳ್ಳುತ್ತಿತ್ತು ಎಂಬ ಅಭಿಪ್ರಾಯವು ಡಾ. ಬಾಳಣ್ಣಾ ಸೀಗಿಹಳ್ಳಿಯವರದಾಗಿದೆ.

ಆಧುನಿಕ ಯುಗದಲ್ಲಿ ಸಮಾಜದ ಸರ್ವತೋಮುಖ ಬೆಳವಣಿಗೆಗೆ ವಿದ್ಯೆಯೇ ನಾಂದಿ. ಬರಲಿರುವ ದಿನಮಾನಗಳಲ್ಲಿ ವಿದೇಶಿ ಶಿಕ್ಷಣ ಸಂಸ್ಥೆಗಳೊಂದಿಗೆ ಪೈಪೋಟಿಗೆ ಇಳಿಯಬೇಕಾದ್ದರಿಂದ ಪ್ರಜಾಪ್ರಭುತ್ವದ ಯಶಸ್ಸು ಸುಶಿಕ್ಷಿತ ನಾಗರಿಕರನ್ನು ಅವಲಂಬಿಸಿರುತ್ತದೆ. ಮಠ-ಮಾನ್ಯದಂತಹ ಸಂಸ್ಥೆಗಳಿಂದ ನಾವು ಅಪೇಕ್ಷಿಸುವ ಶಿಕ್ಷಣವು ಕೇವಲ ಬಾಳಿನ ಹೊರಮೌಲ್ಯದ ವಿಕಾಸಕ್ಕೆ ಮಾತ್ರ ಕಾರಣವಾಗಬಹುದಾದ ನಾಗರಿಕ ವಿದ್ಯೆಯಲ್ಲ. ಮನುಷ್ಯನ ಅಂತರಂಗದ ಕದವನ್ನು ತೆರೆದು ತೋರಬಲ್ಲ ಆತ್ಮೋನ್ನತಿಯ ಮೌಲಿಕ ಶಿಕ್ಷಣದ ಸಂದೇಶವನ್ನು ಸಾರಲು ಮಠಗಳು ಮುಂದಾಗಬೇಕು.

ಒಬ್ಬ ಮಠಾಧೀಶರಾಗಿ ತಮ್ಮ ಬದುಕಿನಲ್ಲಿ ಏನೆಲ್ಲಾ ಸಾಧಿಸಬಹುದು ಎಂಬುದಕ್ಕೆ ಉತ್ತಮ ನಿದರ್ಶನ ನಮ್ಮ ಗದಗನ ಪರಮಪೂಜ್ಯರು. ತಮ್ಮ ಕೊನೆ ಉಸಿರಿರುವ ತನಕವೂ ಬಸವಾದಿ ಶರಣರ ಮಹಾಮಾರ್ಗದಲ್ಲಿ ಮುನ್ನಡೆದು ಸಾಮಾಜಿಕ ಸುಧಾರಣೆ, ಶೈಕ್ಷಣಿಕ ಪ್ರಗತಿ, ಧರ್ಮಜಾಗೃತಿ, ವೈಚಾರಿಕತೆ, ಭಾವೈಕ್ಯತೆ, ರೈತರ ಏಳ್ಗೆಗಾಗಿ, ಕನ್ನಡದ ಜಾಗೃತಿಗಾಗಿ ಅನೂಚಾನವಾಗಿ ಶ್ರಮಿಸಿದ್ದು ಅನುಕರಣೀಯ. ಈ ಐತಿಹಾಸಿಕ ಪೀಠಕ್ಕೆ ಅಧಿಪತಿಗಳಾಗಿದ್ದ ಪೂಜ್ಯರು ವಿರಕ್ತ ಪರಂಪರೆಯ ಪೀಠಕ್ಕೆ ಗೌರವಾಲಂಕಾರಭೂಷಿತರೆನಿಸಿದವರು.

ಜನ ಸೇವೆಯೇ ಜನಾರ್ಧನ ಸೇವೆ ಎಂಬ ತತ್ವ-ಸಿದ್ಧಾಂತ ಪರಿಪಾಲಿಸಿದ ದಿ. ಡಾ.ತೋಂಟದ ಸಿದ್ಧಲಿಂಗ ಸ್ವಾಮೀಜಿಯವರಿಗೆ ಜಾತಿ-ಮತದ ಕಟ್ಟಳೆಗಳು ಎಂದೂ ಅಡ್ಡಬರಲಿಲ್ಲ. ದಿವಂಗತ ಪರಮಪೂಜ್ಯರು ಹಾಕಿಕೊಟ್ಟ ಭವ್ಯವಾದ ಪರಂಪರೆಯಲ್ಲಿಯೇ ಮುಂದುವರೆಯುತ್ತಲಿರುವ ಈಗಿನ ಪೀಠಾಧಿಪತಿಗಳಾದ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮೀಜಿಯವರು ತಮ್ಮ ಹರಿತವಾದ ಲೇಖನಿಯಿಂದ ಸಮಾಜದ ಓರೆ-ಕೋರೆಗಳನ್ನು ನಿವಾರಿಸುತ್ತಲಿರುವರು.

ಹೀಗೆಯೇ ನಮ್ಮೂರಿನ ಶ್ರೀಮಠದ ಕೀರ್ತಿ ಪತಾಕೆ ಮುಗಿಲೆತ್ತರಕ್ಕೇರುತ್ತಾ ಸತತವಾಗಿ ಹಾರುತಲಿರಲಿ ಎಂದು ಮನದುಂಬಿ ಸರ್ವ ಸದ್ಭಕ್ತರು ಹಾರೈಸುತಲಿರುವೆವು.

**- ಪ್ರೊ. ಶಕುಂತಲಾ ಚನ್ನಪ್ಪ.ಸಿಂಧೂರ. ಗದಗ.**

# ಅಕ್ಕಮಹಾದೇವಿ ಸ್ವಾಭಿಮಾನಕ್ಕೆ ಇನ್ನೊಂದು ಹೆಸರು

**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಮನುಷ್ಯನಲ್ಲಿ ಸ್ವಾಭಿಮಾನ ಮುಖ್ಯ. ಸ್ವಾಭಿಮಾನಿ ಮನುಷ್ಯ ಹೇಗಿರುತ್ತಾನೆ ಎನ್ನುವದನ್ನು ನಾವು ಅಕ್ಕಮಹಾದೇವಿಯ ಜೀವನ ನೋಡಿಯೇ ತಿಳಿಯಬೇಕು. ಸ್ವಾಭಿಮಾನಕ್ಕೆ ಇನ್ನೊಂದು ಹೆಸರೇ ಅಕ್ಕಮಹಾದೇವಿ ಎಂದು ಎಸ್‌ಎವಿವಿಪಿ ಸಮಿತಿಯ ಆಡಳಿತಾಧಿಕಾರಿ ಎನ್.ಆರ್. ಗೌಡರ ಹೇಳಿದರು. ಪಟ್ಟಣದ



ಎಸ್.ಎ. ಪ.ಪೂ ಕಾಲೇಜಿನಲ್ಲಿ ಆಚರಿಸಲಾದ ಅಕ್ಕಮಹಾದೇವಿ ಜಯಂತಿಯಲ್ಲಿ ಅವರು ಮಾತನಾಡಿದರು. ಸುಖದ ಜೀವನವನ್ನು ತ್ಯಜಿಸಿ ಅಕ್ಕಮಹಾದೇವಿ ಆಧ್ಯಾತ್ಮಿಕ ಜೀವನಕ್ಕೆ ತನ್ನನ್ನು ಅರ್ಪಿಸಿಕೊಂಡದ್ದೇ ಒಂದು ರೋಚಕ ಕಥೆ. ಚನ್ನಮಲ್ಲಿಕಾರ್ಜುನನೇ ತನ್ನ ಪತಿಯೆಂದು ನಂಬಿ ಅವನನ್ನು ಹುಡುಕುತ್ತ ಹೊರಟ ಆಕೆಯ ವ್ಯಕ್ತಿತ್ವ ಎಲ್ಲರಿಗೂ ಮಾದರಿ. ಆಕೆ ರಚಿಸಿರುವ ವಚನಗಳೆಲ್ಲವೂ ಆಧ್ಯಾತ್ಮಿಕ ಬೋಧನೆಯನ್ನು ಮಾಡುತ್ತವೆ. ಇಂದಿನ ಯುವ ಜನಾಂಗ, ಅದರಲ್ಲೂ ಯುವತಿಯರು ಅಕ್ಕನ ವ್ಯಕ್ತಿತ್ವವನ್ನು ಅಧ್ಯಯನ ಮಾಡಬೇಕೆಂದು ಹೇಳಿದರು.

ಪ್ರಾಚಾರ್ಯ ವೈ.ಸಿ. ಪಾಟೀಲ ಮಾತನಾಡಿ, ಅಕ್ಕಮಹಾದೇವಿಯವರ ವ್ಯಕ್ತಿತ್ವ ಅಸಾಧಾರಣವಾಗಿತ್ತು. ಅವರಲ್ಲಿನ ಸ್ಪಷ್ಟತೆ, ನಿಷ್ಠುರತೆ ಇಂದಿನ ಯುವ ಜನಾಂಗಕ್ಕೆ ದಾರಿದೀಪ. ಸಂಪತ್ತಿನ ತೊಟ್ಟಿಲಲ್ಲಿ ತೂಗಾಡಬೇಕಿದ್ದ ಅಕ್ಕಮಹಾದೇವಿ ತನ್ನಲ್ಲಿನ ಆಧ್ಯಾತ್ಮಿಕತೆಯನ್ನು ಎಚ್ಚರಿಸಿಕೊಂಡು ಚನ್ನಮಲ್ಲಿಕಾರ್ಜುನನ್ನು ಕಾಣುವುದೇ ತನ್ನ ಜೀವನದ ಮುಖ್ಯ ಗುರಿ ಎಂದು ಹೊರಟಳು. ಅಂತಹ ವೈರಾಗ್ಯ ಗುಣವನ್ನು ವ್ಯಕ್ತಿಗಳಲ್ಲಿ ಕಾಣುವುದು ಅಪರೂಪ ಎಂದರು. ನಿವೃತ್ತ ಮುಖ್ಯ ಶಿಕ್ಷಕ ಅರುಣ ಕುಲಕರ್ಣಿ, ನಂದೀಶ ಅಚ್ಚಿ ಮುಂತಾದವರು ಉಪಸ್ಥಿತರಿದ್ದರು.

# ನಾಳೆ ಸಾಧಕರಿಗೆ ಸನ್ಮಾನ

■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಡಾ. ಬಿ.ಆರ್. ಅಂಬೇಡ್ಕರರ 134ನೇ ಜಯಂತಿ ಅಂಗವಾಗಿ ಇಲ್ಲಿಯ ಗ್ರಾಮ ಪಂಚಾಯಿತಿ ಆಶ್ರಯದಲ್ಲಿ ಎಪ್ರಿಲ್ 14ರಂದು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಗುವುದು.

ಗ್ರಾ.ಪಂ ಆವರಣದಲ್ಲಿಯ ಅತ್ತಿಮಬ್ಬೆ ರಂಗ ಮಂದಿರದಲ್ಲಿ ಮುಂಜಾನೆ 10ಕ್ಕೆ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾ.ಪಂ ಅಧ್ಯಕ್ಷ ಕೆ.ಎಸ್. ಪೂಜಾರ ವಹಿಸುವರು. ಮುಖ್ಯ ಅಥಿತಿಗಳಾಗಿ ತಾ.ಪಂ ಕಾರ್ಯ ನಿರ್ವಾಹಕ ಅಧಿಕಾರಿ ಮಲ್ಲಯ್ಯ ಕೊರವನವರ ಆಗಮಿಸುವರು. ಗ್ರಾ.ಪಂ ಉಪಾಧ್ಯಕ್ಷೆ ಪುಷ್ಪಾ ಪಾಟೀಲ, ಸರ್ವ ಸದಸ್ಯರು ಉಪಸ್ಥಿತರಿರುವರು. ಕೃಷಿ, ಶಿಕ್ಷಣ, ಆರಕ್ಷಕ, ಸೇನೆ ಹಾಗೂ ಜಾನಪದ ಕಲೆಯಲ್ಲಿ ಸಾಧನೆ ಮಾಡಿದ ಮಹನೀಯರನ್ನು ಸನ್ಮಾನಿಸಲಾಗುವುದು ಎಂದು ಪಿ.ಡಿ.ಒ ಅಮೀರನಾಯಕ ತಿಳಿಸಿದ್ದಾರೆ.

## ಜಾತಿಗಣತಿ ಜಾರಿಗೆ ವಿಳಂಬ ವಿಚಾರ: ಏ.17ಕ್ಕೆ ಅಂತಿಮ ತೀರ್ಮಾನ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಜಾತಿಗಣತಿ ಜಾರಿಗೆ ವಿಳಂಬ ವಿಚಾರವಾಗಿ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಪ್ರತಿಕ್ರಿಯೆ ಕೊಟ್ಟಿದ್ದಾರೆ.

ಈ ಸಂಬಂಧ ನಗರದಲ್ಲಿ ಮಾತನಾಡಿದ ಅವರು, ಏನು ಮಾಡೋದು ಕಾಂಗ್ರೆಸ್ ಪಕ್ಷದಲ್ಲಿ ಕೆಲವರು ಪಂಚಾಂಗ ನೋಡ್ತಾರೆ. ಕೆಲವರು ಗಿಳಿಶಾಸ್ತ್ರ ಕೇಳ್ತಾರೆ. ನಾವು ಸಂವಿಧಾನ ನೋಡುತ್ತೇವೆ. ಸಂವಿಧಾನದಲ್ಲಿ ಎಲ್ಲದಕ್ಕೂ ಅವಕಾಶ ಇದೆ ಎಂದರು. ಮೂಗಿಗೆ ತುಪ್ಪ ಸವರುವುದಕ್ಕೆ ನಾವು ಗಂಜಲ ರಾಜ್ಯದವರು ಅಲ್ಲ. ನಾವು ನಂದಿನಿ ಹಾಲಿನ ರಾಜ್ಯದವರು. ಎಪ್ರಿಲ್ 17ಕ್ಕೆ ಜಾತಿಗಣತಿ ಬಗ್ಗೆ ತೀರ್ಮಾನ ಆಗುತ್ತದೆ ಎಂದು ಸ್ಪಷ್ಟನೆ ನೀಡಿದರು.

### ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆ ಉದ್ಘಾಟಿಸಿದ ಸಚಿವ ಸಂತೋಷ ಲಾಡ್

# ಪ್ರತಿಯೊಬ್ಬರಿಗೂ ಕ್ರೀಡಾ ಮನೋಭಾವನೆ ಇರಬೇಕು

■ವಿಜಯಸಾಕ್ಷಿ ಸುದ್ದಿ, ಧಾರವಾಡ

ಕ್ರೀಡೆ ಎನ್ನುವುದು ಶಾರೀರಿಕ ಆರೋಗ್ಯವನ್ನು ಮಾತ್ರವಲ್ಲದೆ ಮಾನಸಿಕ ಶಕ್ತಿಯನ್ನು ಹೆಚ್ಚಿಸುವ ಶಕ್ತಿಶಾಲಿ ಸಾಧನವಾಗಿದೆ. ಎಲ್ಲರಲ್ಲೂ ಶಿಸ್ತು, ಸಹಕಾರ, ನೇತೃತ್ವ ಗುಣಗಳು ಹಾಗೂ ಸೋಲನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಕ್ರೀಡೆಗಳಿಂದ ಬೆಳೆಸಿಕೊಳ್ಳಬೇಕು ಎಂದು ಕಾರ್ಮಿಕ ಇಲಾಖೆ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಎಸ್.ಲಾಡ್ ಹೇಳಿದರು.

ಅವರು ಇತ್ತೀಚೆಗೆ ಧಾರವಾಡ ಜಿಲ್ಲಾ ಸರಕಾರಿ ನೌಕರ ಸಂಘದ ನೌಕರ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಜಿಲ್ಲಾ ಶಾಖೆ ಧಾರವಾಡ ಇವರ ಸಹಯೋಗದಲ್ಲಿ ಆಯೋಜಿಸಿದ್ದ ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ದೇಶದ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಕಾಪಾಡಿಕೊಂಡು ಹೋಗಬೇಕು. ಮುಂದೆ ಬಹಳ ದೊಡ್ಡ ಭವಿಷ್ಯವಿದೆ. ಪ್ರಗತಿಶೀಲವಾಗಿ ಬೆಳೆಯುತ್ತಿರುವ ದೇಶ ನಮ್ಮದು. ಯುವ ಪೀಳಿಗೆಯ ಜವಾಬ್ದಾರಿ




ನಿಮ್ಮ ಕೈಯಲ್ಲಿ ಇದೆ. ಅವರನ್ನು ನೀವು ಸರಿಯಾಗಿ ತಯಾರು ಮಾಡಿ ಎಂದು ಹೇಳಿದರು.

ಧಾರವಾಡ ಜಿಲ್ಲಾ ಶಾಖೆ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ ಜಿಲ್ಲಾಧ್ಯಕ್ಷ ಎಸ್.ಎಫ್. ಸಿದ್ದನಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾಧಿಕಾರಿ ದಿವ್ಯ ಪ್ರಭು, ಜಿ.ಪಂ ಸಿಇಒ ಭುವನೇಶ ಪಾಟೀಲ, ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ಸಂಗಪ್ಪ ಗಾಬಿ, ಕ್ರೀಡಾ ಇಲಾಖೆಯಯ ಸಹಾಯಕ ನಿರ್ದೇಶಕ ಮಂಜುನಾಥಸ್ವಾಮಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕ ಎಸ್.ಎಸ್. ಕೆಳದಿಮಠ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಎಸ್.ಎಂ. ಹೊನಕೇರಿ, ಭೂ ದಾಖಲೆಗಳ ಇಲಾಖೆ ಉಪನಿರ್ದೇಶಕ ಮೋಹನ ಶಿವನ್ನವರ, ಕೈಗಾರಿಕಾ ತರಬೇತಿ ಮತ್ತು ಉದ್ಯಮ ಇಲಾಖೆ ಜಂಟಿ ನಿರ್ದೇಶಕ ಬಸವಪ್ರಭು ಹಿರೇಮಠ, ಧಾರವಾಡ ಶಹರ ಬಿಇಓ ಅಶೋಕ ಸಿಂದಗಿ, ತಹಸೀಲ್ದಾರ ಡಾ. ಡಿ.ಎಚ್. ಹೂಗಾರ, ನೌಕರ ಸಂಘದ ಜಿಲ್ಲಾ ಪದಾಧಿಕಾರಿಗಳು, ತಾಲೂಕು ಅಧ್ಯಕ್ಷರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

> ಪ್ರತಿಯೊಬ್ಬರಿಗೂ ಕ್ರೀಡಾಮನೋಭಾವನೆ ಇರಬೇಕು. ಕ್ರೀಡಾ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು. ಮಕ್ಕಳ ಜೊತೆಗೆ ಆಟವಾಡಿ, ನಿಮ್ಮ ಮಕ್ಕಳು ಸಹ ಬೆಳವಣಿಗೆ ಹೊಂದುತ್ತಾರೆ. ಒಂದು ಹಾಡು ಇಡೀ ಸಮಾಜವನ್ನು ಕಟ್ಟಬಹುದು. ಅಂತಹ ಸಂಸ್ಕೃತಿ ಇರುವ ದೇಶ ನಮ್ಮ ಭಾರತವಾಗಿದೆ. ಕಲೆ, ಪ್ರತಿಭೆಗಳ ಬಗ್ಗೆ ಇನ್ನೂ ಹೆಚ್ಚಿನ ಪ್ರಚಾರ ಆಗಬೇಕು. ನಿಮ್ಮಲ್ಲಿರುವ ಕಲೆ, ಕೌಶಲ್ಯಗಳನ್ನು ನಿಮ್ಮಷ್ಟಕ್ಕೆ ಮಾತ್ರ ಸೀಮಿತವಾಗಿ ಇಟ್ಟುಕೊಳ್ಳಬೇಡಿ. ಮಕ್ಕಳು, ಇತರರನ್ನು ಈ ಸಾಂಸ್ಕೃತಿಕ ರಂಗದಲ್ಲಿ ತಯಾರು ಮಾಡುವ ಕೆಲಸ ಆಗಬೇಕು ಎಂದು ಸಚಿವ ಸಂತೋಷ್ ಲಾಡ್ ಹೇಳಿದರು.

# ಕೋಡಿ ಯಲ್ಲಮ್ಮ ದೇವಿ ಜಾತ್ರೆ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಪುರಾತನ ಪ್ರಸಿದ್ಧ ಕೋಡಿ ಯಲ್ಲಮ್ಮ ದೇವಿಯ ದೇವಸ್ಥಾನದಲ್ಲಿ ದವನದ ಹುಣ್ಣಿಮೆ ದಿನದಂದು ಜಾತ್ರಾ ಮಹೋತ್ಸವವು ಅದ್ದೂರಿಯಾಗಿ ನಡೆಯಿತು.

ಪಟ್ಟಣದ ಕಲಾವಿದ ರಮೇಶ ತೊರಗಲ್ ಹಾಗೂ ಕೃಷ್ಣ ತೊರಗಲ್ ಅವರ ಮನೆಯಲ್ಲಿ ದೇವಿಯ ಮೂರ್ತಿಗೆ ಬಣ್ಣ ನೀಡಲಾಗಿದ್ದು, ಶನಿವಾರ ಮುಂಜಾನೆ ಅವರ ಮನೆಯಿಂದ ಅಲಂಕೃತ ಬಂಡಿಯಲ್ಲಿ ದೇವಿಯ ಭವ್ಯ ಮೆರವಣಿಗೆಯು ಪ್ರಾರಂಭಗೊಂಡು ಪಟ್ಟಣದ ಪ್ರಮುಖ ಸ್ಥಳಗಳಲ್ಲಿ ಸಂಚರಿಸಿ ಮಧ್ಯಾಹ್ನದ ವೇಳೆಗೆ ದೇವಸ್ಥಾನಕ್ಕೆ ಆಗಮಿಸಿತು.

ಡೊಳ್ಳು, ಸೇರಿದಂತೆ ಅನೇಕ ವಾದ್ಯಗಳು, ಪೂರ್ಣಕುಂಭ ಹೊತ್ತ ಮಹಿಳೆಯರು ಮೆರವಣಿಗೆಗೆ ಕಳೆ ಹೆಚ್ಚಿಸಿದ್ದರು. ಮೂರ್ತಿಯ ಮೆರವಣಿಗೆ ಸಾಗುವ ಮೊದಲು ಕಲಾವಿದರ ಮನೆಯಿಂದ ದೇವಿಯ ಮೂರ್ತಿಯನ್ನು ಅಲಂಕರಿಸಿ, ಸಂಪ್ರದಾಯಬದ್ಧವಾಗಿ ಮುತ್ತೈದೆಯರು ಉಡಿ ತುಂಬಿದರು.

### ಏಕಲವ್ಯ ಪ್ರಕೃತಿ ವ್ಯಾಲಿ ಪಿರಮಿಡ್ ಧ್ಯಾನ ಕೇಂದ್ರದ ಕಟ್ಟಡ ಕಾಮಗಾರಿಗೆ ಚಾಲನೆ

# ಪಿರಮಿಡ್ ಧ್ಯಾನದಿಂದ ವಿಶಿಷ್ಟ ಅನುಭವ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಬಿ.ಡಿ. ತಟ್ಟಿ(ಅ) ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ನಿರ್ಮಾಣವಾಗಿರುವ ಏಕಲವ್ಯ ಪ್ರಕೃತಿ ವ್ಯಾಲಿ ಪಿರಮಿಡ್ ಧ್ಯಾನ ಕೇಂದ್ರದ ಕಟ್ಟಡ ಕಾಮಗಾರಿಗೆ ಮಾಜಿ ಶಾಸಕದ್ವಯರಾದ ಜಿ.ಎಸ್. ಗಡ್ಡದೇವರಮಠ, ಜಿ.ಎಂ. ಮಹಾಂತಶೆಟ್ಟರ ಶನಿವಾರ ಭೂಮಿಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಶಾಸಕ ಜಿ.ಎಸ್. ಗಡ್ಡದೇವರಮಠ, ಮನಸ್ಸಿನ ನಿಯಂತ್ರಣ ಇಟ್ಟುಕೊಳ್ಳಬೇಕಾದರೆ ಜ್ಞಾನದ ಮೊರೆ ಹೋಗಬೇಕು. ಈ ನಿಟ್ಟಿನಲ್ಲಿ ಪಿರಮಿಡ್ ಧ್ಯಾನವು ವಿಶಿಷ್ಟ ಅನುಭವವನ್ನ ತಂದು-ಕೊಡುತ್ತದೆ. ಇಂತಹ ಪಿರಮಿಡ್ ಧ್ಯಾನದ ಬಗ್ಗೆ ಇಲ್ಲಿನ ಜನರಿಗೆ ತಿಳುವಳಿಕೆ ನೀಡುವ ಕಾರ್ಯ ಮಾಡಿರುವದರ ಜೊತೆಗೆ ಪಿರಾಮಿಡ್ ಧ್ಯಾನ ಕೇಂದ್ರ ಈ ಊರಿನ ಶ್ರೇಷ್ಠ ಸಾಧಕರಲ್ಲಿ ಓರ್ವರಾಗಿದ್ದ ಬಿ.ಡಿ. ತಟ್ಟಿ ಅಣ್ಣವರ ಹಾಗೂ ಪವಿತ್ರ ತಾಣವಾಗಿರುವ ಈ ಶಾಲಾ ಆವರಣದಲ್ಲಿ ನಿರ್ಮಾಣವಾಗುತ್ತಿರುವದು ಸ್ತುತ್ಯಾರ್ಹ ಕಾರ್ಯವಾಗಿದೆ ಎಂದು ಹೇಳಿದರು.

ಹುಬ್ಬಳ್ಳಿಯ ಪಿರಮಿಡ್ ಧ್ಯಾನ ಕೇಂದ್ರದ ಸಂಚಾಲಕಿ ವಿಶಾಲಾಕ್ಷಿ ಆಕಳವಾಡಿ ಮಾತನಾಡಿದರು. ಸಂಸ್ಥೆಯ ಚೇರಮನ್ ಡಾ. ಎಸ್.ಜೆ. ತಟ್ಟಿ ಅಧ್ಯಕ್ಷತೆ ವಹಿಸಿದ್ದರು. ಸುಭಾಸ ಓದುನವರ, ಹುಬ್ಬಳ್ಳಿಯ ಪ್ರಭು ಆನೆಪ್ಪನವರ, ಪೂರ್ಣಿಮಾ ಆನೆಪ್ಪನವರ, ವೃಷಭನಾಥ ಮುತ್ತಿನಹಾರ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಅಧಿಕಾರಿ ಮಹಾಂತೇಶ ಕುರಿ ದಂಪತಿಗಳು, ಓಂಪ್ರಕಾಶ ಜೈನ್, ನಿಂಗಪ್ಪ ಬನ್ನಿ, ಸಂಸ್ಥೆಯ ಗೌರವ ಕಾರ್ಯದರ್ಶಿ ಸೋಮನಾಥ ಮಹಾಜನಶೆಟ್ಟರ, ಧರ್ಮದರ್ಶಿಗಳಾದ ಡಾ. ವಿನೋದ ಹೊನ್ನಿಕೊಪ್ಪ, ಆನಂದ ತಟ್ಟಿ, ಗಿರೀಶ ತಟ್ಟಿ, ಮಹಾಂತೇಶ ತಟ್ಟಿ, ವಿ.ಎಚ್. ಜಯಶ್ರೀ, ಕಲ್ಯಾಣಿ ತಟ್ಟಿ ಉಪಸ್ಥಿತರಿದ್ದರು.

ಸಂಸ್ಥೆಯ ಆಡಳಿತಾಧಿಕಾರಿ ಬಿ.ಬಿ. ಹುಬ್ಬಳ್ಳಿ, ಮುಖ್ಯೋಪಾಧ್ಯಾಯೆ ಜಯಶ್ರೀ ಶೆಟ್ಟರ, ಪ್ರತಿಮಾ ಮಹಾಜನಶೆಟ್ಟರ, ಜಿ.ಪಿ. ಪವಾರ, ಸಾಗರ ಪೂಜಾರಿ, ಪ್ರಕಾಶ ಮಿರ್ಜಿ ಹಾಗೂ ಸಿಬ್ಬಂದಿಗಳು ಹಾಜರಿದ್ದರು.



> ವಸುಂಧರಾ ವಾರಿಯರ್ಸ್ ಮಾರ್ಗದರ್ಶಕ ಚಿಕ್ಕೋಡಿಯ ಡಾ. ಜೀವಂದರ ಕೇತಪ್ಪನವರ ಮಾತನಾಡಿ, ಉತ್ತಮ ಜೀವನಕ್ಕಾಗಿ ಧ್ಯಾನ ಹಾಗೂ ಪಿರಮಿಡ್ ಧ್ಯಾನದ ಪರಿಚಯದ ಕುರಿತು ಸಮಗ್ರ ಮಾಹಿತಿ ನೀಡಿ ಜೀವನದ ಬದುಕುವ ವಿಧಾನವನ್ನು ತಿಳಿಸಬೇಕು. ಮಕ್ಕಳ ಬುದ್ಧಿಶಕ್ತಿ ಹೆಚ್ಚಲು, ವಿಶೇಷ ಪರಿಣಿತಿ ಹೊಂದಲು ಧ್ಯಾನ ಮಾಡಬೇಕು. ಈ ಹಿನ್ನೆಲೆಯಲ್ಲಿ ವಿಕಲಚೇತನರನ್ನು ಸಹ ಈ ಧ್ಯಾನದಲ್ಲಿ ತೊಡಗಿಸಿದಲ್ಲಿ ಅಪಾರ ಪ್ರಮಾಣದ ಬದಲಾವಣೆ ಕಾಣಬಹುದು. ವಿಶೇಷ ಚೇತನರನ್ನು ಸಶಕ್ತಗೊಳಿಸಿ ಅವರ ಆಂತರಿಕ ವಿಶೇಷ ಗುಣಗಳನ್ನು ಜಾಗೃತಗೊಳಿಸಲು ಈ ಪಿರಮಿಡ್ ಧ್ಯಾನ ಹೆಚ್ಚು ಸೂಕ್ತವಾಗಿದೆ ಎಂದರು.

# ಹನುಮಜಯಂತಿ ಅಂಗವಾಗಿ ಧಾರ್ಮಿಕ ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ದವನದ ಹುಣ್ಣಿಮೆಯಂದು ಹನುಮಜಯಂತಿ ಅಂಗವಾಗಿ ಪಟ್ಟಣ ಸೇರಿ ತಾಲೂಕಿನಾದ್ಯಂತ ಹ'ನ'ವ'ಂ'ತ'ದ'ೇ'ವ'ರ' ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಅಲಂಕಾರ, ಅಭಿಷೇಕ, ತೊಟ್ಟಿಲೋತ್ಸವ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು.

ಪಟ್ಟಣದ ಪೇಟೆ ಆಂಜನೇಯ ದೇವಸ್ಥಾನದಲ್ಲಿ ವಿಶೇಷ ಪೂಜೆಯೊಂದಿಗೆ ಅಲಂಕರಿಸಲಾದ ಬೆಳ್ಳಿಯ ತೊಟ್ಟಿಲಲ್ಲಿ ಹನುಮಂತದೇವರ ಉತ್ಸವ ಮೂರ್ತಿಯನ್ನಿರಿಸಿ ಮಹಿಳೆಯರು, ಮಕ್ಕಳು ಸೇರಿ ತೊಟ್ಟಿಲು ಪೂಜೆ ಮಾಡಿ ಜೋಗುಳ ಪದ ಹಾಡಿದರು.

ಈ ವೇಳೆ ಮಾತನಾಡಿದ ಅರ್ಚಕ ಮುರಘೇಂದ್ರಸ್ವಾಮಿ ಹಿರೇಮಠ, ಸೇವೆ, ತ್ಯಾಗ, ನಿಷ್ಠೆ ಹಾಗೂ ಭಕ್ತಿಗೆ ಮತ್ತೊಂದು ಹೆಸರೇ ಹನಮಮಂತ ದೇವರು. ಎಲ್ಲದರಲ್ಲಿಯೂ ಮಿಗಿಲಾದ ಅದಮ್ಯ ಶಕ್ತಿ ಹೊಂದಿದ್ದರೂ ಭಕ್ತಿ, ವಿನಯಶೀಲತೆ, ಸಂಪನ್ನ – ಸದ್ಗುಣಗಳನ್ನು ಹನಮಂತ ಹೊಂದಿದ್ದ.

ರಾಮನ ಭಕ್ತ ಹನುಮಂತ ತನ್ನ ಶ್ರದ್ಧೆ, ಭಕ್ತಿ ನಿಷ್ಠೆಯಿಂದ ಇಂದು ಜಗತ್ತಿಗೆ ಆದರ್ಶ ಪುರುಷೋತ್ತಮನಾಗಿದ್ದಾನೆ ಎಂದರು.

ಹಿರಿಯರಾದ ನೀಲಪ್ಪ ಕರ್ಜೆಕಣ್ಣವರ, ಈಶ್ವರಪ್ಪ ಕುಂಬಾರ, ಭರಮಪ್ಪ ಅಣ್ಣಿಗೇರಿ, ಮಲ್ಲಿಕಾರ್ಜುನ ಮುಳಗುಂದ, ಶೇಖಪ್ಪ ಕರ್ಜೆಕಣ್ಣವರ, ಅಜ್ಜಪ್ಪ ಬಡಿಗೇರ, ರಾಮಣ್ಣ ಕುಂಬಾರ, ಗಂಗಾಧರ ಕುಂಬಾರ, ರಾಜಶೇಖರ ಶಿಗ್ಲಿಮಠ, ಷಣ್ಮುಕ ಗಡ್ಡೆಣ್ಣವರ, ಶಂಕ್ರವ್ವ ಕುಂಬಾರ, ಕವಿತಾ ಹತ್ತಿಕಾಳ, ಸವಿತಾ ಹಿರೇಮಠ, ಲಕ್ಷ್ಮವ್ವ ವಾರದ, ದೀಪಾ ಕುಂಬಾರ, ಮಂಗಳಾ ಕುಂಬಾರ, ರಾಜೇಶ್ವರ ಚಕ್ರಸಾಲಿ, ಹಲವರಿದ್ದರು.

ಪಟ್ಟಣದ ಬಸ್ತಿಬಣ, ಹಳ್ಳದಕೇರಿ, ಹುಲಗೇರಿಬಣ, ಶಿಗ್ಲಿ ನಾಕಾದಲ್ಲಿನ ದೇವಸ್ಥಾನ ಸೇರಿದಂತೆ ತಾಲೂಕಿನ ದೊಡ್ಡೂರ, ಬಾಲೆಹೊಸೂರ, ಚಿಕ್ಕಸವಣೂರ, ಸೂರಣಗಿ, ಬಟ್ಟೂರ, ಬಡ್ನಿ, ಯಲ್ಲಾಪುರ, ಶಿಗ್ಲಿ, ಅಡರಕಟ್ಟಿ, ಗೊಜನೂರ, ಯಳವತ್ತಿ, ರಾಮಗಿರಿ ಗ್ರಾಮದ ಹನಮಂತದೇವರ ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ತೊಟ್ಟಿಲೋತ್ಸವ ನೆರವೇರಿಸಲಾಯಿತು.



# ಹುಲಕೋಟಿ ಪ.ಪೂ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಸಾಧನೆ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಹುಲಕೋಟಿ ಸಹಕಾರಿ ಶಿಕ್ಷಣ ಸಂಸ್ಥೆಯ ಪದವಿಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿಗಳು 2025ರ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆಗೈದಿದ್ದಾರೆ. ಕಲಾ ವಿಭಾಗದಲ್ಲಿ ಸುಕನ್ಯಾ ಕೊಟ್ರಯ್ಯ ಕಟಗಿಹಳ್ಳಿಮಠ 549 (ಶೇ91.05) ಅಂಕಗಳನ್ನು ಗಳಿಸಿ ಮಹಾವಿದ್ಯಾಲಯಕ್ಕೆ ಪ್ರಥಮ ಸ್ಥಾನ ಪಡೆದಿರುತ್ತಾಳೆ. ಶಾಹೀಲ್ ದಾವಲಸಾಬ ಮುಳಗುಂದ 544 (ಶೇ.90.66) ಅಂಕಗಳನ್ನು ಗಳಿಸಿ ದ್ವಿತೀಯ ಮತ್ತು ಪೂರ್ಣಿಮಾ ರವಿ ಬೂದಿಹಾಳ 543 (ಶೇ.90.50) ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದಿರುತ್ತಾರೆ. ಸಂಜನಾ ಶೇಖಪ್ಪ ಹಾದಿಮನಿ 516 (ಶೇ.86.00) ಅಂಕಗಳನ್ನು ಪಡೆದು ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ದೀಪಾ ಲಕ್ಷ್ಮಣ ಸಾಳೊಂಕೆ 476, ಪ್ರತಿಭಾ ಯಲ್ಲಪ್ಪ ಲಚ್ಚಮ್ಮನವರ 466, ಕವಿತಾ ದುಬಾರಿ 447 ಅಂಕಗಳನ್ನು ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಮೃತ್ಯುಂಜಯ ರಾಯಪ್ಪ ಕವಲೂರ 481, ಮೌಲಾಹುಸೇನ ಕುಕನೂರ 449, ಶಹೀನಾಬಾನು ಎಮ್.ಹಳೇಮನಿ 408 ಅಂಕಗಳನ್ನು ಪಡೆದು ಉತ್ತೀರ್ಣರಾಗಿದ್ದಾರೆ. ಈ ಎಲ್ಲ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷರಾದ ಆರ್.ಎಮ್. ಮೂಲಿಮನಿ, ಸ್ಥಾನಿಕ ಸಮಿತಿ ಅಧ್ಯಕ್ಷರಾದ ಎಮ್.ಎಲ್. ಪೋತ್ನಿಸ್, ಆಡಳಿತಾಧಿಕಾರಿಗಳಾದ ಆರ್.ಎಸ್. ಪಾಟೀಲ, ಪ್ರಾಚಾರ್ಯರಾದ ಬಿ.ಬಿ. ಪಾಟೀಲ, ಮಹಾವಿದ್ಯಾಲಯದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ಪಂಚಮುಖಿ ಆಂಜನೇಯ ದೇವಸ್ಥಾನದಲ್ಲಿ ಹನುಮ ಜಯಂತಿ

■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ವಾರ್ಡ್ ನಂ.33ರ ಗಣೇಶ ಕಾಲೋನಿಯ ಪಂಚಮುಖಿ ಆಂಜನೇಯ ದೇವಸ್ಥಾನದಲ್ಲಿ ಹನುಮ ಜಯಂತಿ ಆಚರಿಸಲಾಯಿತು. ಗದಗ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಗೌಡ ಎಚ್.ಪಾಟೀಲ ಶ್ರೀ ದೇವರ ದರ್ಶನ ಮತ್ತು ಆಶೀರ್ವಾದ ಪಡೆದುಕೊಂಡು ಅನ್ನಸಂತರ್ಪಣೆಯಲ್ಲಿ ಭಾಗಿಯಾದರು. ಪಂಚಮುಖಿ ಆಂಜನೇಯ ದೇವಸ್ಥಾನದ ಕಮಿಟಿ ವತಿಯಿಂದ ಕೃಷ್ಣಗೌಡ ಪಾಟೀಲರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಎಸ್ಎಸ್‌ಕೆ ಸಮಾಜದ ಹಿರಿಯರಾದ ಫಕೀರ್‌ಸಾ ಭಾಂಡಗೆ, ನಗರಸಭೆಯ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಎಮ್.ಸಿ. ಶೇಖ, ಗಣ್ಯ ವ್ಯಾಪಾರಸ್ಥರಾದ ಮೋಹನ್ ಪವಾರ್, ನಿವೃತ್ತ ಶಿಕ್ಷಕ ಪ್ರಭುಗೌಡ ಪಾಟೀಲ್, ಸೈಯದ್ ಖಾಲಿದ್ ಕೊಪ್ಪಳ, ಎಸ್.ಎಂ. ಮಾಶಾಳ, ತಿಮ್ಮನಗೌಡ್ರ, ಗಣೇಶ್ ಬಾಕಳೆ, ಶಂಕರ್ ಬಾಕಳೆ, ಚೂಡಾಮಣಿಸಾ ಮೆರವಾಡೆ ಹಾಗೂ ಕಮಿಟಿಯ ಸದಸ್ಯರು, ಸದ್ಭಕ್ತರು ಉಪಸ್ಥಿತರಿದ್ದರು.



# ನ್ಯಾಷನಲ್ ಹೆರಾಲ್ಡ್ ಪ್ರಕರಣ । ಸೋನಿಯಾ, ರಾಹುಲ್ ಗಾಂಧಿ ಆಸ್ತಿ ಮುಟ್ಟುಗೋಲು ಪ್ರಕ್ರಿಯೆ ಆರಂಭಿಸಿದ ಇಡಿ

■ವಿಜಯಸಾಕ್ಷಿ ಸುದ್ದಿ, ನವದಹಲಿ

ಕಾಂಗ್ರೆಸ್ ಪಕ್ಷ ನಿಯಂತ್ರಿತ ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್ (ಎಜೆಎಲ್) ವಿರುದ್ಧದ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿಯಲ್ಲಿರುವ ನ್ಯಾಷನಲ್ ಹೆರಾಲ್ಡ್ ಹೌಸ್, ಲಕ್ನೋದಲ್ಲಿರುವ ನೆಹರು ಭವನ ಮತ್ತು ಮುಂಬೈನಲ್ಲಿರುವ ಹೆರಾಲ್ಡ್ ಹೌಸ್ ಅನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಜಾರಿ ನಿರ್ದೇಶನಾಲಯ (ಇಡಿ) ಶನಿವಾರ ಪ್ರಾರಂಭಿಸಿದೆ ಎಂದು ವರದಿಯಾಗಿದೆ. ನ್ಯಾಷನಲ್ ಹೆರಾಲ್ಡ್ ಪ್ರಕರಣ

ಕಾಂಗ್ರೆಸ್‌ನ ಉನ್ನತ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅಲ್ಪ ಮೊತ್ತಕ್ಕೆ ಆಸ್ತಿಗಳನ್ನು ಸಂಪಾದಿಸಿದ್ದಾರೆ ಎಂದು ತನ್ನ ತನಿಖೆಯು "ನಿರ್ಣಾಯಕವಾಗಿ ಬಹಿರಂಗಪಡಿಸಿದೆ" ಎಂದು ಇಡಿ ಹೇಳಿಕೊಂಡಿದೆ. ಸೋನಿಯಾ ಮತ್ತು ರಾಹುಲ್ ಅವರ ಲಾಭದಾಯಕ ಒಡೆತನದ ಖಾಸಗಿ ಕಂಪನಿಯಾದ ಯಂಗ್ ಇಂಡಿಯನ್, 2000 ಕೋಟಿ ರೂ. ಮೌಲ್ಯದ ಎಜೆಎಲ್ ಆಸ್ತಿಗಳನ್ನು ಕೇವಲ 50 ಲಕ್ಷ ರೂ.ಗಳಿಗೆ ಸ್ವಾಧೀನಪಡಿಸಿಕೊಂಡಿದೆ ಎಂದು ಸಂಸ್ಥೆ ಹೇಳಿಕೆಯಲ್ಲಿ ಹೇಳಿಕೊಂಡಿದೆ.

"18 ಕೋಟಿ ರೂ.ಗಳಷ್ಟು ನಕಲಿ ದೇಣಿಗೆ, 38 ಕೋಟಿ ರೂ.ಗಳಷ್ಟು ನಕಲಿ ಮುಂಗಡ ಬಾಡಿಗೆ ಮತ್ತು 29 ಕೋಟಿ ರೂ.ಗಳಷ್ಟು ನಕಲಿ ಜಾಹೀರಾತುಗಳ ರೂಪದಲ್ಲಿ ಯಂಗ್ ಇಂಡಿಯನ್ ಮತ್ತು ಎಜೆಎಲ್ ಆಸ್ತಿಗಳನ್ನು ಮತ್ತಷ್ಟು ಅಪರಾಧದ ಆದಾಯವನ್ನು ಉತ್ಪಾದಿಸಲು ಬಳಸಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇಡಿ) ಸಂಶೋಧನೆಗಳು ಸೂಚಿಸುತ್ತವೆ" ಎಂದು ಇಡಿ ಹೇಳಿದೆ. "ಆದ್ದರಿಂದ ಅಪರಾಧದ ಆದಾಯದ ಮತ್ತಷ್ಟು ಉತ್ಪಾದನೆ, ಬಳಕೆ ಮತ್ತು ಆನಂದವನ್ನು ನಿಲ್ಲಿಸಲು ಕಳಂಕಿತ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಲು ಜಾರಿ ನಿರ್ದೇಶನಾಲಯವು ಕ್ರಮಗಳನ್ನು ಪ್ರಾರಂಭಿಸಿದೆ" ಎಂದು ಅದು ಹೇಳಿಕೊಂಡಿದೆ. ಇಡಿ ಮಾಡಿರುವ ಎಲ್ಲಾ ಆರೋಪಗಳನ್ನು ಕಾಂಗ್ರೆಸ್ ನಿರಾಕರಿಸಿದ್ದು, ಪಕ್ಷದ ಹಿರಿಯ ಸಂಸದ, ವಕೀಲ ಅಭಿಷೇಕ್ ಸಿಂಘ್ವಿ ಅವರು ನವೆಂಬರ್ 2023 ರಲ್ಲಿ ಹೀಗೆ ಹೇಳಿದ್ದರು: "ಯಾವುದೇ ಸ್ಥಿರಾಸ್ತಿ ವರ್ಗಾವಣೆ ಅಥವಾ ಹಣದ ಚಲಾವಣೆ ಇಲ್ಲದ ಸಾಲದ ನಿಯೋಜನೆಯನ್ನು, ಕಾಂಗ್ರೆಸ್ ಮತ್ತು ಅದರ ಪರಂಪರೆಗೆ ಸಂಬಂಧಿಸಿದೆ ಎಂಬ ಒಂದೆ ಒಂದು ಕಾರಣಕ್ಕಾಗಿ ಭಾರತದ ಸ್ವಾತಂತ್ರ್ಯ ಚಳವಳಿಯ ಸಾಂಕೇತಿಕ ಧ್ವನಿಯಾದ ನ್ಯಾಷನಲ್ ಹೆರಾಲ್ಡ್‌ನಂತಹ ಕಂಪನಿಯ ಆಸ್ತಿಗಳನ್ನು ಜಪ್ತಿ ಮಾಡಲು ಮತ್ತು ಮುಟ್ಟುಗೋಲು ಹಾಕಲು ಸಮರ್ಥನೆ ನೀಡುವಂತೆ ತೋರಿಸಲಾಗುತ್ತಿದೆ."

## ಮಳೆ ಆರ್ಭಟ: ಮಸ್ಕಿ ತಾಲ್ಲೂಕಿನಲ್ಲಿ ಭತ್ತದ ಬೆಳೆ ಸಂಪೂರ್ಣ ಹಾನಿ!



**■ವಿಜಯಸಾಕ್ಷಿ ಸುದ್ದಿ, ರಾಯಚೂರು**

ಭಾರೀ ಮಳೆಯಿಂದಾಗಿ ಕಟಾವಿಗೆ ಬಂದಿದ್ದ ಭತ್ತದ ಬೆಳೆ ಮಕಾಡೆ ಮಲಗಿರುವ ಘಟನೆ ಜಿಲ್ಲೆಯ ಮಸ್ಕಿ ತಾಲೂಕಿನಲ್ಲಿ ಜರುಗಿದೆ. ಘಟನೆಯಿಂದ ರೈತನ ಬೆಳೆ ನೆಲ ಕಚ್ಚಿದೆ. ಕೆಲವೆಡೆ ಗದ್ದೆಯಲ್ಲಿ ನೀರು ನಿಂತು ಅಪಾರ ಪ್ರಮಾಣದಲ್ಲಿ ಬೆಳೆ ನಷ್ಟವಾಗಿದೆ. ಆಲಿಕಲ್ಲು ಮಳೆಗೆ ಗೌಡನಬಾವಿ, ಸಾಗರ ಕ್ಯಾಂಪ್, ಬೆಳ್ಳಿಗನೂರು ಗ್ರಾಮದಲ್ಲಿ ಬೆಳೆ ಹಾನಿಯಾಗಿದೆ. ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ ಅಂತ ರೈತರು ಅಳಲು ತೋಡಿಕೊಂಡಿದ್ದಾರೆ. ಒಣಗಿರುವ ಭತ್ತದ ಕಾಳು ನೆಲಕ್ಕೆ ಬಿದ್ದು ಮೊಳಕೆ ಒಡೆಯುವ ಆತಂಕ ಎದುರಾಗಿದೆ. ಇನ್ನೂ ರಾಜ್ಯದ ಹಲವೆಡೆ ಎ.16ರವರೆಗೆ ಭಾರೀ ಗಾಳಿ, ಗುಡುಗು ಮಿಂಚು ಸಹಿತ ಮಳೆಯಾಗಲಿದೆ ಎನ್ನಲಾಗಿದೆ.

### ಶ್ರೀ ಹಾಲೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ 10 ಜೋಡಿ ಸಾಮೂಹಿಕ ವಿವಾಹ


# ಸಾಮೂಹಿಕ ವಿವಾಹದಿಂದ ದುಂದುವೆಚ್ಚಕ್ಕೆ ಕಡಿವಾಣ

**■ವಿಜಯಸಾಕ್ಷಿ ಸುದ್ದಿ, ಡಂಬಳ**

ಸಾಮೂಹಿಕ ವಿವಾಹಗಳು ದುಂದುವೆಚ್ಚಕ್ಕೆ ಕಡಿವಾಣ ಹಾಕಿ, ಆರ್ಥಿವಾಗಿ ತೊಂದರೆಗಳಿಗೆ ಒಳಗಾಗುವುದನ್ನು ತಪ್ಪಿಸುವುದಲ್ಲದೆ, ನೆಮ್ಮದಿಯ ಜೀವನಕ್ಕೆ ನಾಂದಿ ಹಾಡುತ್ತವೆ ಎಂದು ವಿರಪಾಪುರದ ಗುರು ಮುದಕೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಡಂಬಳ ಹೋಬಳಿಯ ಪೇಠಾಆಲೂರ ಗ್ರಾಮದ ಶ್ರೀ ಹಾಲೇಶ್ವರ ದೇವರ 47ನೇ ಜಾತ್ರಾ ಮಹೋತ್ಸವದ ನಿಮಿತ್ತ ಹಮ್ಮಿಕೊಂಡಿದ್ದ ಸಾಮೂಹಿಕ ವಿವಾಹ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಇಂತಹ ದುಬಾರಿ ಸಮಯದಲ್ಲಿ ಮನೆ ಕಟ್ಟುವುದು ಮತ್ತು ಮದುವೆ



ಮಾಡುವುದು ಬಹಳ ಕಷ್ಟದ ಕೆಲಸ. ಜೊತೆಗೆ ಆರ್ಥಿಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇದನ್ನು ಮನಗಂಡು ತ್ರಿವಿಧ ದಾಸೋಹಿಗಳಾದ ಶ್ರೀ ಹಾಲೇಶ್ವರ ಶಿವಶರಣರು ಪ್ರತಿ ವರ್ಷ ಬಡವರಿಗಾಗಿ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಸಿಕೊಂಡು ಬಂದಿದ್ದಾರೆ. ಜಾತ್ರಾ ಮಹೋತ್ಸವದಲ್ಲಿ ಬಡವರ ಹಿತಕ್ಕಾಗಿ ಇಲ್ಲಿಯವರೆಗೆ 460ಕ್ಕೂ ಹೆಚ್ಚು ಜೋಡಿಗಳಿಗೆ ಮದುವೆ ಮಾಡಿಸಿದ್ದು ಪ್ರಶಂಸನೀಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಾಲೇಶ್ವರ ಮಠದ ಕಾರ್ಯದರ್ಶಿ ಪಂಚಾಕ್ಷರಯ್ಯ ಹಿರೇಮಠ, ಮಲ್ಲಯ್ಯ ಹಿರೇಮಠ, ಚಂದ್ರು ನಾಗರಡ್ಡಿ, ನಾಗಪ್ಪ ಚಿಕರಡ್ಡಿ,

ತ್ರಿವಿಧ ದಾಸೋಹಿ ಹಾಲೇಶ್ವರ ಶಿವಶರಣರು ಮಾತನಾಡಿ, ವಧು-ವರರು ದಾಂಪತ್ಯ ಜೀವನವನ್ನು ಮಾದರಿಯಾಗಿ ನಡೆಸುವ ಮೂಲಕ ಸಮಾಜಕ್ಕೆ ಮಾದರಿಯಾಗಬೇಕು. ಇಂದಿನ ದಿನಮಾನಗಳಲ್ಲಿ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಮದುವೆ ಕಬ್ಬಿಣದ ಕಡಲೆ ಇದ್ದಂತೆ. ಉಳ್ಳವರು ಸಾಮೂಹಿಕ ವಿವಾಹದಂತಹ ಸತ್ಕಾರ್ಯಕ್ಕೆ ಮುಂದಾಗಿ ಬಡವ, ಶ್ರೀಮಂತ, ಮೇಲು, ಕೀಳೆನ್ನದೆ ಎಲ್ಲರೂ ಒಂದೇ ಎನ್ನುವ ಭಾವನೆಯೊಂದಿಗೆ ನಡೆಸುವ ಸತ್ಕಾರ್ಯ ಮಾಡಬೇಕು. ಇಂತಹ ಸಾಮಾಜಿಕ ಕಳಕಳಿಯೊಂದಿಗೆ ಭಕ್ತರ ಸಹಕಾರದಿಂದಾಗಿ ಜಾತ್ರಾ ಮಹೋತ್ಸವದಲ್ಲಿ ಸಾಮೂಹಿಕ ವಿವಾಹ ಜರುಗಲು ಕಾರಣವಾಗಿರುವುದು ಶ್ಲಾಘನೀಯ ಎಂದು ಹೇಳಿದರು.

ವೀರನಗೌಡ ಸುಳ್ಳದ, ಶರಣಪ್ಪ ಬೂತರಡ್ಡಿ, ಹಾಲೇಶ ಸೂಡಿ, ಶರಣಪ್ಪ ಪರಡ್ಡಿ, ಮುನಿಯಪ್ಪ ಯು, ಶರಣಪ್ಪ ಕೆಂಚನಗೌಡ, ತೋಟಪ್ಪ ಶಿವಸಟ್ಟರ, ಬಸಣ್ಣ ಗೌರಿ, ಗುರಪ್ಪ ತಳವಾರ, ಶರಣಪ್ಪ ಸಂಸಿ, ಫಕೀರಪ್ಪ ಡಂಬಳ, ರವಿ ಚಾಕಲಬ್ಬಿ, ಶರಣಪ್ಪ ಶಂಸಿ, ಸಿದ್ದಮ್ಮ ಸಂಸಿ, ಇರಮ್ಮ ತುರ್ಕಾಣಿ, ರೇಣವ್ವ ತುರ್ಕಾಣಿ, ಹುಲಗೇವ್ವ ಉಪ್ಪಾರ, ಶಾಂತಮ್ಮ ಮುಂಡಾಸ, ರೇಣವ್ವ ಬಾರಕೇರ, ಮಲ್ಲವ್ವ ಕುಂಟರ, ಜೇನಮ್ಮ ನಧಾಪ, ಮುದಕವ್ವ ಹೂಗಾರ, ಪಾರಮ್ಮ ಅರವಟಗಿ ಸೇರಿದಂತೆ ಗ್ರಾಮದ ಹಿರಿಯರು, ಯುವಕರು, ಹಾಲೇಶ್ವರ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳು, ಗ್ರಾಮಸ್ಥರು ಇದ್ದರು.

### ಕೆಯುಡಬ್ಲ್ಯೂಜೆ ರಾಜ್ಯ ಮಟ್ಟದ ಕ್ರಿಕೆಟ್ ಟೂರ್ನಾಮೆಂಟ್

# ಮೊದಲ ಪಂದ್ಯದಲ್ಲಿ ಗದಗ ತಂಡಕ್ಕೆ ಜಯ

**■ವಿಜಯಸಾಕ್ಷಿ ಸುದ್ದಿ, ಹಾಸನ**

ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಹಾಸನದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಕ್ರಿಕೆಟ್ ಟೂರ್ನಾಮೆಂಟ್‌ನಲ್ಲಿ ಗದಗ ಜಿಲ್ಲಾ ಕಾ.ನಿ.ಪ ತಂಡ ಭಾಗವಹಿಸಿ ವಿಜಯಪುರ ತಂಡದ ವಿರುದ್ಧ ಭರ್ಜರಿ ಜಯ ಸಾಧಿಸಿತು.

ಹಾಸನ ನಗರದ ವಿಜ್ಞಾನ ಕಾಲೇಜು ಮೈದಾನದಲ್ಲಿ ನಡೆದ ಮೊದಲ ಪಂದ್ಯದಲ್ಲಿ ಟಾಸ್ ಗೆದ್ದ ಸಂತೋಷ ಕೊಣ್ಣೂರ ನೇತೃತ್ವದ ಗದಗ ತಂಡ ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಈ ವೇಳೆ ತಂಡದ ಯುವ ದಾಂ-ಡಿಗ ಸುರೇಶ ಕಡ್ಲಿಮಟ್ಟಿ ಜೊತೆ ನಾಯಕ ಸಂತೋಷ ಇನ್ನಿಂಗ್ಸ್ ನಡೆಸಿ ಅದ್ಭುತ ಆರಂಭ ನೀಡಿದರು. ಮೊದಲ ವಿಕೆಟ್‌ಗೆ 47 ರನ್ ಕಲೆ ಹಾಕಿದರು.



ಮೊದಲ ಪಂದ್ಯದಲ್ಲಿ ಜಯ ಸಾಧಿಸಿ ಆತ್ಮ ವಿಶ್ವಾಸದೊಂದಿಗೆ ಬೀಗುತ್ತಿರುವ ಗದಗ ತಂಡ ಎರಡನೇ ಪಂದ್ಯದಲ್ಲಿ ಕೊಪ್ಪಳ ತಂಡವನ್ನು ಎದುರಿಸಲಿದ್ದು, ಗೆಲುವಿನ ವಿಶ್ವಾಸದಲ್ಲಿದೆ. ಪಂದ್ಯಕ್ಕೆ ಮಳೆ ಅಡಚಣೆ ಇರುವುದರಿಂದ ಶನಿವಾರದ ಪಂದ್ಯಗಳನ್ನು ಭಾನುವಾರಕ್ಕೆ ಮುಂದೂಡಲಾಗಿದೆ.

ಅಂತಿಮವಾಗಿ ನಿಗದಿತ 6 ಓವರ್‌ಗಳಲ್ಲಿ ಗದಗ ಜಿಲ್ಲಾ ತಂಡ ಕೇವಲ ಮೂರು ವಿಕೆಟ್ ಕಳೆದುಕೊಂಡು 62 ರನ್ ಕಲೆಹಾಕಿತು. ನಂತರ ಇನ್ನಿಂಗ್ಸ್ ಆರಂಭಿಸಿದ ವಿಜಯಪುರ ತಂಡ ನಿಧಾನಗತಿಯಲ್ಲಿ ಆರಂಭ ಮಾಡಿತು. ಮೊದಲ ಓವರ್ ಎಸೆಯಲು ಬಂದ ಸುರೇಶ ಎರಡು ಕ್ಯಾಚ್ ಅವಕಾಶ ಸೃಷ್ಟಿಸಿದ್ದರು. ಆದರೆ, ಎರಡು ಕ್ಯಾಚ್ ಕೈಚೆಲ್ಲಿದ ನಂತರವೂ ಗದಗ ತಂಡ 12 ರನ್‌ಗಳ ಅಮೋಘ ಜಯ ಸಾಧಿಸಿ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಕಾ.ನಿ.ಪ ಜಿಲ್ಲಾ ಉಪಾಧ್ಯಕ್ಷ ಬನೇಶ ಕುಲಕರ್ಣಿ, ಶಂಕರ ಗುರಿಕಾರ, ಪ್ರಕಾಶ ಗುದ್ದಿನ, ಗಣೇಶ ದೊಡ್ಡಮನಿ, ಗೌಸ್ ಬೆಟಗೇರಿ, ಫೈರೋಜ್ ಮೋಮಿನ್, ಅಶೋಕ ಹೂಗಾರ, ರಾಕೇಶ್ ಕುಲಕರ್ಣಿ, ಪರಶುರಾಮ ಹಳ್ಳದ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

# ಶ್ರೀ ಹಾಲಸ್ವಾಮಿ ಮುಳ್ಳು ಗದ್ದುಗೆ ಉತ್ಸವ



**■ವಿಜಯಸಾಕ್ಷಿ ಸುದ್ದಿ, ಡಂಬಳ**

ಇಲ್ಲಿನ ಪೇಠಾಆಲೂರ ಗ್ರಾಮದಲ್ಲಿ 47ನೇ ವರ್ಷದ ಶ್ರೀ ಹಾಲೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ಹಾಲಸ್ವಾಮಿ ಮುಳ್ಳು ಗದ್ದುಗೆ ಉತ್ಸವ ಶುಕ್ರವಾರ ರಾತ್ರಿ ಸಂಭ್ರಮದಿಂದ ಜರುಗಿತು.

ಹಾಲಸ್ವಾಮಿ ಮಠದ ಧಾರ್ಮಿಕ ಪರಂಪರೆಯಂತೆ ಪೂಜಾ ಅನುಷ್ಠಾನ ಕೈಗೊಂಡಿದ್ದ ತ್ರಿವಿಧ ದಾಸೋಹಿ ಶ್ರೀ ಹಾಲೇಶ್ವರ ಶಿವಶರಣರು ಸ್ವಾಮಿಯ ಗದ್ದುಗೆಗೆ ಪೂಜೆ ನೆರವೇರಿಸಿ ಮುಳ್ಳಿನ ಮಂಟಪ ಆರೋಹಣ ಮಾಡಿದರು.

ಶ್ರೀಮಠದ ಬಳಿ ರಾತ್ರಿ 10.30 ಗಂಟೆಗೆ ಆರಂಭವಾದ ಮುಳ್ಳು ಗದ್ದುಗೆ ಉತ್ಸವ, ಗ್ರಾಮದ ಪ್ರಮುಖ ಬೀದಿಯ ಮೂಲಕ ಸಾಗಿ ಬೆಳಗಿನ ಜಾವ ಮೂಲ ಸ್ಥಳದಲ್ಲಿ ಸಂಪನ್ನಗೊಂಡಿತು. ಸವಾಳ, ನಂದಿಕೋಲು, ಮಂಗಳವಾದ್ಯ, ಡೊಳ್ಳು ಕುಣಿತ, ವಾದ್ಯ ವೈಭವಗಳು ಉತ್ಸವದ ಮೆರಗನ್ನು ಹೆಚ್ಚಿಸಿದ್ದವು. ಪೇಠಾಆಲೂರಿನ ಸುತ್ತಮುತ್ತಲಿನ ಗ್ರಾಮಗಳ ಅಪಾರ ಭಕ್ತರು ಉತ್ಸವದಲ್ಲಿ ಪಾಲ್ಗೊಂಡಿದ್ದರು.

ಗ್ರಾಮದಲ್ಲಿ ಶನಿವಾರ ಸಂಜೆ ಹಾಲಸ್ವಾಮಿ ರಥೋತ್ಸವ ವಿವಿಧ ವಾದ್ಯಮೇಳದ ಮೂಲಕ ವಿಜೃಂಭಣೆಯಿಂದ ಜರುಗಿತು. ಅಪಾರ ಭಕ್ತರು ರಥೋತ್ಸವದಲ್ಲಿ ಭಾಗವಹಿಸಿ, ರಥಕ್ಕೆ ಉತ್ತತ್ತಿ ಬಾಳೆಹಣ್ಣು ಎಸೆದು ಭಕ್ತಿಯನ್ನು ಸಮರ್ಪಿಸಿದರು.

# ಮಾರುತಿ ದೇವಸ್ಥಾನದಲ್ಲಿ ಹನುಮ ಜಯಂತಿ



**■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**

ಹನುಮ ಮಾಲಾ ಸೇವಾ ಸಮಿತಿಯ ಆಶ್ರಯದಲ್ಲಿ ಇಲ್ಲಿಯ ಅಗಸಿ ಮಾರುತಿ ದೇವಸ್ಥಾನದಲ್ಲಿ ಹನುಮ ಜಯಂತಿಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಷಡಕ್ಷರಯ್ಯ ಬದ್ನಿಮಠ ಅವರ ನೇತೃತ್ವದಲ್ಲಿ ಮಾರುತಿ ದೇವರ ಮೂರ್ತಿಗೆ ಅಭಿಷೇಕ, ವಿವಿಧ ಪೂಜಾ ಕೈಂಕರ್ಯಗಳು ಜರುಗಿದವು. ನಂತರ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮದೊಂದಿಗೆ ತೊಟ್ಟಿಲ ಪೂಜೆ ನೆರವೇರಿಸಲಾಯಿತು. ವಿಧಿ-ವಿಧಾನದೊಂದಿಗೆ ಹನುಮಂತ ದೇವರ ತೊಟ್ಟಿಲೋತ್ಸವ, ನಂತರ ಅನ್ನಪ್ರಸಾದ ನಡೆಯಿತು. ಗ್ರಾಮದ ಪ್ರಮುಖ ಬೀದಿಯಲ್ಲಿ ಹನುಮನ ಭಾವಚಿತ್ರ ಮೆರವಣಿಗೆ ಅದ್ದೂರಿಯಾಗಿ ನಡೆಯಿತು.

ಮಾರುತಿ ನಗರದ ಆಂಜನೇಯ ದೇವಸ್ಥಾನದಲ್ಲಿ ಹನುಮ ಜಯಂತಿಯನ್ನು ಸಂಭ್ರಮದಿಂದ ಆಚರಿಸಲಾಯಿತು. ಅರ್ಚಕ ಕೃಷ್ಣಾ ಹಡಗಲಿ ಅವರ ನೇತೃತ್ವದಲ್ಲಿ ಮಾರುತಿ ದೇವರಿಗೆ ಪೂಜಾ ಕಾರ್ಯಕ್ರಮಗಳು ನೆರವೇರಿದವು.

ಐತಿಹಾಸಿಕ ಕನ್ನರ ಭಾವಿಯ ಹನುಮಂತ ದೇವರಿಗೆ ಮಾಜಿ ಸೈನಿಕ ದತ್ತಾತ್ರೇಯ ಜೋಶಿ ಅವರ ನೇತೃತ್ವದಲ್ಲಿ ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ತೊಟ್ಟಿಲು ಪೂಜೆ ಮಾಡಿ ಹನುಮನ ಜಯಂತಿಯನ್ನು ಆಚರಿಸಲಾಯಿತು.

### ಡಾ. ಚಂದ್ರು ಲಮಾಣಿ ಅಭಿಮಾನಿ ಬಳಗದ ವತಿಯಿಂದ ಉಚಿತ ಪಠ್ಯ ವಿಷಯ ಬೋಧನಾ ಶಿಬಿರ

# ಕಲಿಕೆಗೆ ಬಡತನ ಅಡ್ಡಿಯಾಗದು

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಎಲ್ಲ ದಾನಗಳಲ್ಲಿ ವಿದ್ಯಾದಾನ ಶ್ರೇಷ್ಠವಾಗಿದ್ದು, ನಿಸ್ವಾರ್ಥದಿಂದ ಮಕ್ಕಳಿಗೆ ವಿದ್ಯೆಯನ್ನು ಧಾರೆ ಎರೆಯುವ ಕಾರ್ಯವಾಗಬೇಕು. ಈ ನಿಟ್ಟಿನಲ್ಲಿ ಗ್ರಾಮೀಣ ಭಾಗದ ಎಸ್‌ಎಸ್‌ಎಲ್‌ಸಿ ಬಡ ವಿದ್ಯಾರ್ಥಿಗಳಿಗೆ ಕಳೆದ 5 ವರ್ಷಗಳಿಂದ ಪಠ್ಯ ವಿಷಯ ಸಂಪೂರ್ಣತಾ ಕಾರ್ಯಕ್ರಮವನ್ನು ಏರ್ಪಡಿಸುತ್ತಿರುವ ಡಾ. ಚಂದ್ರು ಅಭಿಮಾನಿ ಬಳಗದ ಕಾರ್ಯ ಸ್ತುತ್ಯಾರ್ಹವಾಗಿದೆ ಎಂದು ಮಾಜಿ ಶಾಸಕ ಗಂಗಣ್ಣ ಮಹಾಂತಶೆಟ್ಟರ ಹೇಳಿದರು.

ಅವರು ಶನಿವಾರ ಡಾ. ಚಂದ್ರು ಲಮಾಣಿ ಅಭಿಮಾನಿ ಬಳಗದ ವತಿಯಿಂದ 2 ತಿಂಗಳು ಕಾಲ ಲಕ್ಷ್ಮೇಶ್ವರ ಹಾಗೂ ಸುತ್ತಮುತ್ತಲಿನ ಗ್ರಾಮಗಳ 2026-26ರ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ (ಕನ್ನಡ ಮಾಧ್ಯಮದ) ಉಚಿತವಾಗಿ ಹಮ್ಮಿಕೊಂಡಿರುವ ಸಂಪೂರ್ಣ ಪಠ್ಯ ವಿಷಯ ಬೋಧನಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.




ತಾಲೂಕಿನ ವಿವಿಧ ಗ್ರಾಮಗಳಿಂದ ನೂರಾರು ವಿದ್ಯಾರ್ಥಿಗಳು ತರಬೇತಿ ಶಿಬಿರಕ್ಕೆ ಹಾಜರಾಗಿದ್ದರು. ವಿವಿಧ ವಿಷಯಗಳ ಬೋಧನೆಗಾಗಿ ನುರಿತ ಶಿಕ್ಷಕ ವೃಂದ ಎರಡು ತಿಂಗಳುಗಳ ಕಾಲ ಮಕ್ಕಳಿಗೆ ವಿಷಯಗಳನ್ನು ಬೋಧಿಸಲಿದ್ದಾರೆ.

ಬಡ ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ಅಭ್ಯಾಸ ಮಾಡುವ ಮೂಲಕ ಉನ್ನತ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳಿಗೆ ಎಸ್‌ಎಸ್‌ಎಲ್‌ಸಿ ಒಂದನೇ ಮೆಟ್ಟಿಲು. ಈ ಶಿಬಿರದ ಸದುಪಯೋಗ ಪಡೆದುಕೊಂಡು ಜೀವನವನ್ನು ಉಜ್ವಲಗೊಳಿಸಿಕೊಳ್ಳಬೇಕು. ಮೊಬೈಲ್ ಗೀಳು ಬಿಟ್ಟು ಓದುವ ಕಡೆ ಗಮನ ಕೊಡಿ ಎಂದು ಹೇಳಿದರು.

ತಹಸೀಲ್ದಾರ್ ವಾಸುದೇವ ಸ್ವಾಮಿ ಮಾತನಾಡಿ, ಎಸ್‌ಎಸ್‌ಎಲ್‌ಸಿ ಪಠ್ಯ ಶಿಬಿರ ಹಮ್ಮಿಕೊಂಡಿರುವು ಸ್ವಾಗತಾರ್ಹವಾಗಿದೆ. ಬಡ ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಭಾಗವಹಿಸಿ ಶಿಕ್ಷಕರು ಹೇಳಿಕೊಟ್ಟ ಪಾಠವನ್ನು ಕಲಿತು ಉನ್ನತ ಅಂಕ ಗಳಿಸಬಹುದಾಗಿದೆ. ಬಡತನವು ಕಲಿಕೆಗೆ ಎಂದೂ ಅಡ್ಡಿಯಾಗುವುದಿಲ್ಲ. ವಿದ್ಯಾರ್ಥಿಗಳು ತಮ್ಮಲ್ಲಿನ ಪ್ರತಿಭೆಗಳನ್ನು ಹೊರತರುವ ಕಾರ್ಯ ಮಾಡಬೇಕು. ಅಂದಿನ ಪಾಠವನ್ನು ಅಂದೇ ಪುನರ್ ಮನನ ಮಾಡಬೇಕು. ಇದರಿಂದ ನೆನಪಿನ ಶಕ್ತಿ ವೃದ್ಧಿಸುತ್ತದೆ ಎಂದು ಹೇಳಿದರು.

ಶಿರಹಟ್ಟಿ ಬಿಇಓ ಎಚ್.ಎನ್. ನಾಯ್ಕ್, ಗದಗ ಗ್ರಾಮೀಣ ಬಿ.ಇ.ಓ ವಿ.ವಿ. ನಡುವಿನಮನಿ ಮಾತನಾಡಿದರು. ರಮೇಶ ನವಲೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಶಾಸಕ ಡಾ. ಚಂದ್ರು ಲಮಾಣಿ ಅಭಿಮಾನಿ ಬಳಗದ ಅಧ್ಯಕ್ಷ ನವೀನ ಬೆಳ್ಳಟ್ಟಿ, ಬಸವರಾಜ ಚಕ್ರಸಾಲಿ, ವಿಜಯ ಮೆಕ್ಕಿ, ಕಿರಣ ಲಮಾಣಿ, ಈರಣ್ಣ ಗಾಣಗೇರ, ಶಿಕ್ಷಕರಾದ ಕೆ.ಆರ್. ಲಮಾಣಿ, ದೀಪಕ್ ಕರಾಟೆ, ಶ್ವೇತಾ ಅಂಬಲಿ, ಶಿವಪ್ರಕಾಶ ಗುಡಗೇರಿ, ಉಮೇಶ ನೇಕಾರ, ಸತೀಶ ಬೋಮಲೆ ಮುಂತಾದವರು ಇದ್ದರು. ಸಂತೋಷ ರಾಠೋಡ ನಿರ್ವಹಿಸಿದರು.

# ಅಸ್ತಿತ್ವ ಉಳಿಸಿಕೊಳ್ಳಲು ಸರ್ಕಾರದ ವಿರುದ್ಧ ಜೆಡಿಎಸ್ ಹೋರಾಟ: ಡಿಸಿಎಂ ಡಿಕೆಶಿ ವ್ಯಂಗ್ಯ!

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಜೆಡಿಎಸ್ ಪಕ್ಷವೂ ಸರ್ಕಾರದ ವಿರುದ್ಧ ಹೋರಾಟ ಮಾಡುತ್ತಿರುವ ವಿಚಾರದ ಬಗ್ಗೆ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಪ್ರತಿಕ್ರಿಯೆ ಕೊಟ್ಟಿದ್ದಾರೆ.

ಈ ಸಂಬಂಧ ಮಾತನಾಡಿದ ಅವರು, "ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೋರಾಟ ಮಾಡಬಾರದು ಎಂದು ಹೇಳಲು ಸಾಧ್ಯವಿಲ್ಲ. ಜೆಡಿಎಸ್ ಪಕ್ಷದವರು 'ಸಾಕಪ್ಪಾ ಸಾಕು ಬಿಜೆಪಿ ಸರ್ಕಾರ' ಎಂದು ಹೋರಾಟ ಮಾಡಲು ಸಲಹೆ ನೀಡುತ್ತೇನೆ.

ಅವರು ಸಿದ್ಧಾಂತವನ್ನು ಬಳಸಿಕೊಂಡಿದ್ದು, ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹೋರಾಟ ಮಾಡುತ್ತಿದ್ದಾರೆ. ಅವರಿಗೆ ಅಭಿನಂದನೆಗಳು" ಎಂದು ತಿಳಿಸಿದರು.

ಕರಗ ಉತ್ಸವಕ್ಕೆ ಅನುದಾನ ನೀಡಿಲ್ಲ ಎಂಬ ಆರೋಪದ ಬಗ್ಗೆ ಕೇಳಿದಾಗ, "ನಮಗೆ ಯಾರು ಬಂದು ಅರ್ಜಿ ನೀಡಿದ್ದಾರೋ ಅವರಿಗೆ ನೆರವು ನೀಡಲಿದ್ದೇವೆ. ಇದಕ್ಕೆ ಬಜೆಟ್ ನಲ್ಲೂ ಅನುದಾನ ಮೀಸಲಿಡಲಾಗಿದೆ. ಅವರು 2-3 ಭಾಗಗಳಾಗಿರಬೇಕು.

ಎಲ್ಲರೂ ಒಗ್ಗಟ್ಟಾಗಿ ಬಂದರೆ, ಕರಗ ಉತ್ಸವಕ್ಕೆ ಮೊದಲಿನಿಂದಲೂ ಯಾವ ರೀತಿ ನೆರವು ನೀಡುತ್ತಿದ್ದೆವೋ ಅದನ್ನೇ ನೀಡುತ್ತೇವೆ. ನಾವು ಅನುದಾನ ನೀಡದಿದ್ದರೆ ನಮಗೆ ಆಹ್ವಾನ ಯಾಕೆ ನೀಡಿದ್ದಾರೆ?"ಎಂದು ತಿಳಿಸಿದರು.

# ಬಸವೇಶ್ವರ ನಗರದಿಂದ 'ಬಸವ ಬುತ್ತಿ' ಸೇವೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದುಗಿನ ತೋಂಟದಾರ್ಯ ಜಾತ್ರಾ ಮಹೋತ್ಸವಕ್ಕೆ ದಾಸೋಹಕ್ಕಾಗಿ ಗದುಗಿನ ಬಸವೇಶ್ವರ ನಗರದ ಭಕ್ತಾದಿಗಳು ಶುಕ್ರವಾರ 'ಬಸವ ಬುತ್ತಿ'ಯ ಸೇವಾ ಕೈಂಕರ್ಯ ಸಲ್ಲಿಸಿದರು. ದಾನೇಶ್ವರಿ ಮಹಿಳಾ ಮಂಡಳ ಸೇರಿದಂತೆ ಭಕ್ತಾದಿಗಳು ಬಸವ ಬುತ್ತಿಯನ್ನು ಬಸವೇಶ್ವರ ನಗರದ ವೀರಭದ್ರೇಶ್ವರ ದೇವಸ್ಥಾನಕ್ಕೆ ತಂದು ಅಲ್ಲಿಂದ ವಿಶೇಷ ವಾಹನದಲ್ಲಿ ತೋಂಟದಾರ್ಯ ಮಠಕ್ಕೆ ಶ್ರದ್ಧಾಭಕ್ತಿಯೊಂದಿಗೆ ಮೆರವಣಿಗೆ ಮೂಲಕ ಆಗಮಿಸಿದರು.

ವೀರಭದ್ರೇಶ್ವರ ದೇವಸ್ಥಾನದಿಂದ



ಕರ್ನಾಟಕ ಟಾಕೀಜ್, ಮಹಾತ್ಮ ಗಾಂಧಿ ಸರ್ಕಲ್, ತೋಂಟದಾರ್ಯ ಮಠದ ಕಮಾನು ಮಾರ್ಗವಾಗಿ ತೋಂಟದಾರ್ಯ ಮಠವನ್ನು ತಲುಪಿದರು. ಬಸವೇಶ್ವರ ನಗರದ ಗುರುಹಿರಿಯರು, ಯುವಕರ ಪಡೆ ಮಹಿಳಾ ಮಂಡಳಕ್ಕೆ ಸಾಥ್ ನೀಡಿದರು.

ದಾನೇಶ್ವರಿ ಮಹಿಳಾ ಮಂಡಳದ ಕಾರ್ಯದರ್ಶಿ, ತೋಂಟದಾರ್ಯ ಜಾತ್ರಾ ಮಹೋತ್ಸವ ಸಮಿತಿಯ ಉಪಾಧ್ಯಕ್ಷರೂ ಆದ ಶೈಲಾ ಕೋಡೆಕಲ್ಲ, ದಾನೇಶ್ವರಿ ಮಹಿಳಾ ಮಂಡಳದ ಅಧ್ಯಕ್ಷೆ ಲಲಿತಾ ತಡಸದ, ರಾಜೇಶ್ವರಿ ಕುಬಸದ, ಶೋಭ ಗುಗ್ಗರಿ, ವಿಜಯಲಕ್ಷ್ಮೀ ಕುಬಸದ, ಸುರೇಖಾ ಪಿಳ್ಳೆ, ಮಹಾನಂದಾ ಯಂಡಿಗೇರಿ, ವಿಜಯಲಕ್ಷ್ಮೀ ಕಾತರಕಿ, ಶಿವಲೀಲಾ ಅಕ್ಕಿ, ಜಯಶ್ರೀ ಉಗಲಾಟದ, ವಿದ್ಯಾವತಿ ಗಡಗಿ, ಜ್ಯೋತಿ, ವೀರಭದ್ರೇಶ್ವರ ದೇವಸ್ಥಾನ ಹಿರಿಯ ಟ್ರಸ್ಟಿಗಳಾದ ರಾಚಪ್ಪ ಮಿಣಜಗಿ, ಶಿವಪುತ್ರಪ್ಪ ಬೇವಿನಮರದ, ಶಂಭುಲಿಂಗಪ್ಪ ಕಾರಕಟ್ಟಿ, ಸುರೇಶ ಕೊಡೇಕಲ್ಲ, ಈರಣ್ಣ ಕಾತರಕಿ, ಪ್ರದೀಪ ಕೊಡೇಕಲ್ಲ, ಕುಬಸದ ಮುಂತಾದವರಿದ್ದರು.

ಜಾತ್ರಾ ಮಹೋತ್ಸವ ಸಮಿತಿಯ ಉಪಾಧ್ಯಕ್ಷ ಕರವೀರಯ್ಯ ಕೋರಿಮಠ, ಕಾರ್ಯದರ್ಶಿ ಶಿವಪ್ಪ ಕತ್ತಿ, ಸಹ ಕಾರ್ಯದರ್ಶಿ ದಶರಥರಾಜ ಕೊಳ್ಳಿ, ಸಿದ್ಧರಾಮಪ್ಪ ಗೊಜನೂರ, ಕೋಶಾಧ್ಯಕ್ಷ ಈರಣ್ಣ ಗೋಡಚಿ, ಸಹ ಕೋಶಾಧ್ಯಕ್ಷ ರಾಜಶೇಖರ ಲಕ್ಕುಂಡಿ, ಟ್ರಸ್ಟಿ ಶಿವಬಸಪ್ಪ ಯಂಡಿಗೇರಿ, ಅಮರೇಶ ಅಂಗಡಿ ಅವರು ಬಸವ ಬುತ್ತಿಯನ್ನು ಶ್ರದ್ಧಾಭಕ್ತಿಯೊಂದಿಗೆ ಬರಮಾಡಿಕೊಂಡು ಬಸವೇಶ್ವರ ನಗರದ ಭಕ್ತಾಧಿಗಳ ದಾಸೋಹ ಕಾರ್ಯವನ್ನು ಶ್ಲಾಘಿಸಿದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka